# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಜುಲೈ 16, 2022

ಸಂಪುಟ : 49 ಸಂಚಿಕೆ : 63 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಸಾರಿಗೆ ಸೇವಾ ಧುರೀಣರ ಸಂಕಷ್ಟ ನಿವಾರಣೆ ಸರ್ಕಾರದ ಹೊಣೆ



ನಿಗಮದ ಲಾಭ - ನಷ್ಟ ಲೆಕ್ಕಿಸದೇ ಸೂಕ್ತ ವೇತನ ನೀಡಬೇಕು : ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಸಮ್ಮೇಳನ ಸಮಾರಂಭದ ತರಳಬಾಳು ಶ್ರೀಗಳು

ದಾವಣಗೆರೆ, ಜು. 15 - ರಾಜ್ಯದ ಕೋಟ್ಯಂತರ ಜನರಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸುವ ಸಾರಿಗೆ ಸಂಸ್ಥೆಯ ನೌಕರರು ಸೇವಾ ಧುರೀಣರು. ಇವರ ಸಂಕಷ್ಟ ನಿವಾರಿಸುವುದು ಸರ್ಕಾರದ ಹೊಣೆ ಎಂದು ಸಿರಿಗೆರೆ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ವತಿಯಿಂದ ನಗರದ ತ್ರಿಶೂಲ್ ಕಲಾ ಭವನದಲ್ಲಿ ಆಯೋಜಿಸಲಾಗಿದ್ದ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಸಮ್ಮೇಳನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ರಾಜ್ಯದ ಸಾರಿಗೆ ನಿಗಮಗಳಲ್ಲಿ 1.25 ಲಕ್ಷ ಉದ್ಯೋಗಿಗಳಿದ್ದಾರೆ. ಇವರು ನೌಕರಿ ಮಾಡುತ್ತಿಲ್ಲ, ಸೇವೆ ಮಾಡುತ್ತಿದ್ದಾರೆ. ಇವರ ಸೇವೆಗಾಗಿ ಲಾಭ - ನಷ್ಟ ಲೆಕ್ಕಿಸದೇ ಸೂಕ್ತ ವೇತನ ನೀಡುವುದು ಸರ್ಕಾರದ ಹೊಣೆ ಎಂದು ಶ್ರೀಗಳು ತಿಳಿಸಿದರು.

ನಿಮ್ಮ ಕಷ್ಟಗಳ ಬಗ್ಗೆ ಸರ್ಕಾರದ ಜೊತೆ ಮಾತನಾಡಲು ಯಾವುದೇ ಸಂಕೋಚ ಇಲ್ಲ. ಆದರೆ, ಸರ್ಕಾರದ ಬಳಿ ಸುಲಭವಾಗಿ ಕೆಲಸ ಆಗುವುದಿಲ್ಲ. ಸರ್ಕಾರಿ ಉದ್ಯೋಗಿಗಳಿಗೆ ಸಮಾನವಾದ ವೇತನ ನೀಡಲು ಸಾವಿರಾರು ಕೋಟಿ ರೂ.ಗಳು ಬೇಕಾಗುತ್ತವೆ ಎಂದವರು ಹೇಳಿದರು.

ನೌಕರರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೈ ಬಿಡಲು ಸರ್ಕಾರ ಮುಂದಾಗಬೇಕು. ಇದರಿಂದ ನೌಕರರಿಗೆ ಮಾನಸಿಕ ನೆಮ್ಮದಿ (3ನೇ ಪುಟಕ್ಕೆ)

### ಆಹ್ವಾನಿಸಿ ತಪ್ಪು ಮಾಡಿದಿರಿ

ಸಮಾರಂಭದಲ್ಲಿ ಮಾತನಾಡಿದ ಹಲವಾರು ಮುಖಂಡರು, ತರಳಬಾಳು ಜಗದ್ಗುರುಗಳು ನೌಕರರ ಪರವಾಗಿ ಸರ್ಕಾರದ ಜೊತೆ ಮಾತನಾಡಬೇಕೆಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀಗಳು, ನೀವು ನಮ್ಮನ್ನು ಆಹ್ವಾನಿಸಿ, ತಪ್ಪು ಮಾಡಿದಿರಿ. ನ್ಯಾಯಾಧೀಶರಾದವರು ವಕೀಲರ ರೀತಿ ಒಬ್ಬರ ಪರವಾಗಿ ಮಾತನಾಡಲು ಆಗುವುದಿಲ್ಲ. ಈ ರೀತಿ ಕರೆಸಿ ರಾಜಕಾರಣಿಗಳ ಜೊತೆ ಮಾತನಾಡುವಂತೆ ಕೇಳಿ, ಅವರಿಗೆ ಬೇರೆ ದೃಷ್ಟಿ ಆಗುವಂತೆ ಮಾಡಿದ್ದು ತಪ್ಪು ಎಂದವರು ಹೇಳಿದರು.

ಆಹ್ವಾನ ಪತ್ರಿಕೆಯಲ್ಲಿ ತಮ್ಮ ಚಿತ್ರವೊಂದನ್ನೇ ದೊಡ್ಡದಾಗಿ ಪ್ರಕಟಿಸಿ ಉಳಿದ ಆಹ್ವಾನಿತ ರಾಜಕಾರಣಿಗಳ ಚಿತ್ರ ಪ್ರಕಟಿಸಿರಲಿಲ್ಲ. ಈ ಬಗ್ಗೆ ತಮ್ಮ ಆಕ್ಷೇಪವಿತ್ತು. ಮತ್ತೊಂದು ಆಹ್ವಾನ ಪತ್ರ ಪ್ರಕಟಿಸಿ ಅದರಲ್ಲಿ ಆಹ್ವಾನಿತ ರಾಜಕಾರಣಿಗಳ ಚಿತ್ರಗಳನ್ನು ಪ್ರಕಟಿಸುವಂತೆ ತಿಳಿಸಿದ್ದೆ ಎಂದೂ ಶ್ರೀಗಳು ಹೇಳಿದರು. ಯಾವ ದೇವರಿಂದ ಫಲ ಬೇಕೋ ಆ ದೇವರ ಪೂಜೆ ಮಾಡಬೇಕು. ಬೇಡಿಕೆ ಈಡೇರಿಸುವ ಧುರೀಣರ ನಿರ್ಲಕ್ಷ್ಯ ಮಾಡಿದರೆ, ಅವರಿಗೆ ಬೇಸರ ಆಗುತ್ತದೆ ಎಂದು ಶ್ರೀಗಳು ಕಿವಿಮಾತು ಹೇಳಿದರು.

# ಕ್ಷೇತ್ರದಲ್ಲೇ ಝೂಂಡ ಹೂಡಬೇಡಿ

## ಜನಪರ ಕಡತಗಳಿಗೆ ಮೋಕ್ಷ ನೀಡಿ: ಸಚಿವರಿಗೆ ಬಿಜೆಪಿ-ಆರೆಸ್ಸೆಸ್ ಸೂಚನೆ

ಬೆಂಗಳೂರು, ಜು. 15 - ಕ್ಷೇತ್ರದಲ್ಲೇ ಝೂಂಡ ಹೂಡಬೇಡಿ. ರಾಜ್ಯ ಪ್ರವಾಸ ಕೈಗೊಳ್ಳಿ, ಇನ್ನೆರಡು ತಿಂಗಳಲ್ಲಿ ಜನಪರ ಕಡತಗಳಿಗೆ ಮೋಕ್ಷ ನೀಡಿ ಎಂದು ಸಚಿವರುಗಳಿಗೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಾಯಕರು ಚಾಟಿ ಬೀಸಿದ್ದಾರೆ.

ನಗರದ ಹೊರ ವಲಯದಲ್ಲಿ ನಡೆಯುತ್ತಿರುವ ಚಿಂತನ ಮಂಥನ ಸಭೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯನ್ನೇ ಕೇಂದ್ರವಾಗಿಟ್ಟುಕೊಂಡು ಸುದೀರ್ಘ ಚರ್ಚೆ ಮಾಡಿದ ನಾಯಕರು, ಕಳೆದ ಕೆಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾರ್ಯಕ್ರಮಗಳನ್ನು ತಕ್ಷಣವೇ ಅನುಷ್ಠಾನಗೊಳಿಸಿ, ಮತದಾರರ ಮನಸ್ಸು ಗೆಲ್ಲಿ ಎಂದು ನಾಯಕರು ಹೇಳಿದ್ದಾರೆ.

ನೆನೆಗುದಿಗೆ ಬಿದ್ದಿರುವ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಅಕ್ರಮ ಮನೆ, ನಿವೇಶನಗಳನ್ನು ಸಕ್ರಮಗೊಳಿಸುವ ಕಾರ್ಯ ತಕ್ಷಣ ಕೈಗೆತ್ತಿಕೊಳ್ಳಿ.

ಅರಣ್ಯ ಭೂಮಿಯಲ್ಲಿ ಉಳುಮೆ ಮಾಡುತ್ತಿರುವವರಿಗೆ ಹಕ್ಕುಪತ್ರ ಕಲ್ಪಿಸಿ, ಎಷ್ಟು ಸಾಧ್ಯವೋ ಅಷ್ಟು ಮನೆಗಳನ್ನು ಬಡವರಿಗೆ ನಿರ್ಮಿಸಿಕೊಡಿ.

ಅಕ್ರಮ ಸಕ್ರಮ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೂ ಮತ್ತು ಸ್ಥಳೀಯ ಸಂಸ್ಥೆಗಳಿಗೂ ಸಾವಿರಾರು ಕೋಟಿ ರೂ. ಹಣ ಬರುತ್ತದೆ. ಜನರಿಗೂ ಒಂದು ಬಾರಿಗೆ ನೆಮ್ಮದಿ ದೊರೆತಂತಾಗುತ್ತದೆ.

ಅರಣ್ಯ ಭೂಮಿ ಒತ್ತುವರಿ ಮಾಡುತ್ತಿರುವವರಿಗೆ ಹಕ್ಕುಪತ್ರ ನೀಡುವ ಕಾರ್ಯಕ್ಕೆ ಚಾಲನೆ ನೀಡಿ. ಇಂತಹ ಜನಪರ ಯೋಜನೆಗಳು ಕಡತದಲ್ಲಿ ಕೊಳೆಯುತ್ತಿವೆ. ಅವುಗಳ ಧೂಳು ಹೊಡೆದು ಅನುಷ್ಠಾನಗೊಳಿಸಿ, ಇದರಿಂದ ಸರ್ಕಾರದ ವರ್ಚಸ್ಸು ಹೆಚ್ಚುತ್ತದೆ. ಸರ್ಕಾರದ ವರ್ಚಸ್ಸು ಹೆಚ್ಚಿದರೆ, ಪಕ್ಷದ ವರ್ಚಸ್ಸು ತಾನಾಗಿಯೇ ಬೆಳೆಯುತ್ತದೆ.

### ಸಚಿವರು ಯಾವ ರೀತಿ ನಡೆದುಕೊಳ್ಳಬೇಕು, ಕಡತಗಳ ವಿಲೇವಾರಿ ಯಾವ ಪ್ರಮಾಣದಲ್ಲಿ ನಡೆಯಬೇಕು ಎಂಬೆಲ್ಲ ಬಗ್ಗೆ ಚಿಂತನ ಮಂಥನ ಸಭೆಯಲ್ಲಿ ಪಾಠ

ಬಹುತೇಕ ಸಚಿವರು ಕ್ಷೇತ್ರ ಜಿಲ್ಲೆಗೆ ಸೀಮಿತರಾಗಿದ್ದೀರಿ. ರಾಜ್ಯವನ್ನು ಒಂದು ಬಾರಿಯೂ ಸುತ್ತಾಡಿಲ್ಲ. ಇನ್ನು ಕಾರ್ಯಕ್ರಮಗಳನ್ನು ಎಲ್ಲಿಂದ ಅನುಷ್ಠಾನಕ್ಕೆ ತರುತ್ತೀರಿ.

ಸಚಿವರಾಗುವಾಗಿನ ಆಸಕ್ತಿ ನಂತರ ಯಾಕೆ ಇರುವುದಿಲ್ಲ? ಇನ್ನು ಸಮಯವಿಲ್ಲ. ಇರುವ ವೇಳೆಯನ್ನು ಬಳಕೆ ಮಾಡಿ, ಕಾರ್ಯಕ್ರಮ ರೂಪಿಸಿ, ಜನರ ಬಳಿಗೆ ತೆರಳಿ ಎಂದವರು ಹೇಳಿದ್ದಾರೆ.

ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರದ ಆರೋಪಗಳ ಸುರಿಮಳೆ ಬರುತ್ತಿದೆ. ಇದಕ್ಕೆ ಯಾರು ಕಾರಣರು. ನೀವು ಸಮರ್ಥರಿದ್ದರೆ ಇಂತಹ ಆರೋಪಗಳು ಬರುವುದಿಲ್ಲ. ಪ್ರತಿಪಕ್ಷಗಳು ಇರುವುದೇ ಆರೋಪ ಮಾಡುವುದಕ್ಕೆ, ಅದನ್ನು ನಿಭಾಯಿಸುವ ಶಕ್ತಿಯೂ ನಿಮಗಿರಬೇಕು.

ನಮ್ಮ ಪಕ್ಷದ ಶಾಸಕರ ಅರ್ಜಿಗಳಿಗೆ ನಿಮ್ಮಿಂದ ಪುರಸ್ಕಾರ ದೊರೆಯುತ್ತಿಲ್ಲವಂತೆ, ಹೀಗಾದರೆ ಹೇಗೆ, ಮುಂದೆ ಅವರು ಚುನಾವಣೆ ಎದುರಿಸಬೇಕು. ಕ್ಷೇತ್ರದ ಜನರಿಗೆ ಉತ್ತರದಾಯಕರಾಗಬೇಕು. ಅಧಿಕಾರದಲ್ಲಿರುವವರು ಅವರ ಕೆಲಸ ಮಾಡಲಿಲ್ಲ ಎಂದರೆ ಹೇಗೆ ಎಂದು ಸಚಿವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಚಿಂತನ ಮಂಥನ ಸಭೆ ಅತ್ಯಂತ ಗೌಪ್ಯವಾಗಿ ನಡೆದಿದ್ದು, ಆರ್‌ಎಸ್‌ಎಸ್‌ನ ಯಾವ ಮುಖಂಡರು ಭಾಗವಹಿಸಿದ್ದರೆಂಬ ಬಗ್ಗೆ ಮಾಹಿತಿ ನೀಡುತ್ತಿಲ್ಲ. ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಅವರ ಮಾರ್ಗದರ್ಶನದಲ್ಲೇ ನಡೆಯಿತು.

ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ (3ನೇ ಪುಟಕ್ಕೆ)

## ಸರ್ಕಾರಿ ಕಚೇರಿಗಳಲ್ಲಿ ಫೋಟೋ ವಿಡಿಯೋ ತೆಗೆಯುವಂತಿಲ್ಲ

ಬೆಂಗಳೂರು, ಜು. 15 - ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಕಚೇರಿ ವೇಳೆಯಲ್ಲಿ ಇನ್ನು ಮುಂದೆ ಅನುಮತಿ ಇಲ್ಲದೆ ಫೋಟೋ, ವಿಡಿಯೋ ತೆಗೆಯುವಂತಿಲ್ಲ.

### ಅನಧಿಕೃತವಾಗಿ ಫೋಟೋ, ವಿಡಿಯೋ ತೆಗೆದರೆ ಕ್ರಮ

ಈ ಸಂಬಂಧ ಸರ್ಕಾರ ಆದೇಶ ಹೊರಡಿಸಿದ್ದು, ಸಾರ್ವಜನಿಕರು ಅನಧಿಕೃತವಾಗಿ ಕಚೇರಿಗಳಲ್ಲಿ ಫೋಟೋ ವಿಡಿಯೋ ತೆಗೆದರೆ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುವುದು. ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರು ಅವರ ಕೆಲಸ ಕಾರ್ಯಗಳ ನಿಮಿತ್ತ ಆಗಮಿಸುವ ಸಂದರ್ಭದಲ್ಲಿ ಕೆಲವರು ಫೋಟೋ, ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಸರ್ಕಾರದ ಘನತೆಗೆ ಕುಂದು ಉಂಟು ಮಾಡುತ್ತಿದ್ದಾರೆ.

ಅದರಲ್ಲೂ ವಿಶೇಷವಾಗಿ ಮಹಿಳಾ ನೌಕರರಿಗೆ ಸಮಸ್ಯೆ ಉಂಟಾಗುತ್ತಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಯ ಕಚೇರಿಗಳಲ್ಲಿ ಛಾಯಾಚಿತ್ರ ತೆಗೆಯದಂತೆ ಆದೇಶ ಮಾಡಲಾಗಿದೆ.

## ಆಹಾರ ಧಾನ್ಯಗಳ ಮೇಲೆ ಶೇ.5ರಷ್ಟು ಜಿಎಸ್‌ಟಿಗೆ ತೀವ್ರ ವಿರೋಧ



ದಾವಣಗೆರೆ, ಜು.15- ಜಿಲ್ಲಾ ಅಕ್ಕಿ ಗಿರಣಿದಾರರು ಮತ್ತು ಸಗಟು ವ್ಯಾಪಾರಿಗಳು ಇಂದು ತಮ್ಮ ವಹಿವಾಟು ಬಂದ್‌ಗೊಳಿಸುವ ಮುಖೇನ ಆಹಾರ ಧಾನ್ಯಗಳ ಮೇಲೆ ಶೇ.5ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಿರುವುದನ್ನು ವಿರೋಧಿಸಿ, ಸರ್ಕಾರದ ಗಮನ ಸೆಳೆದಿದ್ದಾರೆ.

### ವಹಿವಾಟು ಬಂದ್ ಗೊಳಿಸಿದ ಜಿಲ್ಲಾ ಅಕ್ಕಿ ಗಿರಣಿದಾರರು, ಸಗಟು ವ್ಯಾಪಾರಿಗಳು

ಅಕ್ಕಿ, ರಾಗಿ, ಜೋಳ ಇನ್ನಿತರೇ ದವಸ ಧಾನ್ಯಗಳ ಮೇಲೆ ಜುಲೈ 18ರಿಂದ ಶೇ.5ರಷ್ಟು ತೆರಿಗೆ ವಿಧಿಸುವುದಾಗಿ ಜಿಎಸ್‌ಟಿ ಮಂಡಳಿಯು ತಿಳಿಸಿದೆ. ಇದನ್ನು ವಿರೋಧಿಸಿ ರಾಜ್ಯದಾದ್ಯಂತ ಅಕ್ಕಿ ಗಿರಣಿಗಳನ್ನು ಬಂದ್ ಮಾಡಲು ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಸಂಘದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ ಶುಕ್ರವಾರ ಮತ್ತು ಶನಿವಾರ ಎರಡು ದಿನಗಳ ಕಾಲ ಅಕ್ಕಿ ಗಿರಣಿ ಮತ್ತು ಸಗಟು ವ್ಯಾಪಾರಿಗಳು ತಮ್ಮ (2ನೇ ಪುಟಕ್ಕೆ)

## ಜಲಸಿರಿ: ಡಿಸೆಂಬರ್ ಒಳಗೆ ಮುಗಿಸಿ

### ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದ ಸಿದ್ದೇಶ್ವರ್ ತಾಕೀತು



ದಾವಣಗೆರೆ, ಜು.15- ಜಲಸಿರಿ ಯೋಜನೆಯಡಿ ಕೈಗೊಂಡಿರುವ ವಿವಿಧ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸಿ, ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಲೋಕಸಭಾ ಸದಸ್ಯ ಡಾ. ಜಿ.ಎಂ.ಸಿದ್ದೇಶ್ವರ ಹೇಳಿದರು.

ಶುಕ್ರವಾರ ದಾವಣಗೆರೆ ಸ್ಮಾರ್ಟ್ ಸಿಟಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನಿರಂತರ ನೀರು ಸರಬರಾಜು ಕಾಮಗಾರಿಯ ಪ್ರಗತಿ ಪರಿಶೀಲನೆ ಹಾಗೂ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ 24x7 ನೀರು ಸರಬರಾಜು ಕಾಮಗಾರಿಯನ್ನು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಪೂರ್ಣಗೊಳಿಸಬೇಕು. ನಗರದಾದ್ಯಂತ ವಿವಿಧ ಬಡಾವಣೆ ರಸ್ತೆಗಳಲ್ಲಿ ಗುಂಡಿಗಳನ್ನು ತೆಗೆದು ಪೈಪ್ ಲೈನ್ ಅಳವಡಿಸಿ ನಿರ್ಲಕ್ಷ್ಯ ಮಾಡದೆ ಆ ರಸ್ತೆಗಳನ್ನು ಮರು ಕಾಂಕ್ರೀಟೀಕರಣ ಮಾಡಿ (3ನೇ ಪುಟಕ್ಕೆ)

## ತುಂಗಭದ್ರಾ ನದಿಯಲ್ಲಿ ಪ್ರವಾಹ

### ನಡುಗಡ್ಡೆಯಾದ ಉಕ್ಕಡಗಾತ್ರಿ, ತೋಟ, ಗದ್ದೆ ಜಲಾವೃತ



ಮಲೇಬೆನ್ನೂರು, ಜು.15- ತುಂಗಾ ಮತ್ತು ಭದ್ರಾ ಜಲಾಶಯಗಳಿಂದ ಸುಮಾರು 1 ಲಕ್ಷಕ್ಕೂ ಅಧಿಕ ಕ್ಯೂಸೆಕ್ಸ್ ನೀರನ್ನು ತುಂಗಭದ್ರಾ ನದಿಗೆ ಬಿಟ್ಟಿರುವುದರಿಂದ ಸುಕ್ಷೇತ್ರ ಉಕ್ಕಡಗಾತ್ರಿ ನಡುಗಡ್ಡೆಯಂತಾಗಿದೆ.

ಉಕ್ಕಡಗಾತ್ರಿಗೆ ಸಂಪರ್ಕಿಸುವ ಪತ್ತೇಪುರ ಮತ್ತು ಮಾಳನಾಯಕನಹಳ್ಳಿ ರಸ್ತೆಗಳು ನದಿ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದು, ಉಕ್ಕಡಗಾತ್ರಿಗೆ ಬರುವವರು ಸಣ್ಣ ಸಂಗಾಪುರ ಅಥವಾ ಮಾಕನೂರು-ಅನ್ವೇರಿ, ನಿಟುವಳ್ಳಿಗೆ ಮಾರ್ಗವಾಗಿ ಹೋಗಬೇಕಿದೆ.

ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದ ಕೆಳಗಡೆ ಇರುವ ನದಿ ರಸ್ತೆ ನೀರಿನಲ್ಲಿ ಮುಳುಗಡೆ ಆಗಿದೆ. ಅಷ್ಟೇ ಅಲ್ಲ ನದಿ ಪಾತ್ರದಲ್ಲಿ ತೋಟ, ಗದ್ದೆಗಳು ಕೂಡಾ ಜಲಾವೃತಗೊಂಡಿವೆ.

ಶುಕ್ರವಾರ ಸಂಜೆ ವೇಳೆಗೆ ತುಂಗಾ ಮತ್ತು ಭದ್ರಾ ಜಲಾಶಯಗಳಿಗೆ ಒಳಹರಿವು ಕಡಿಮೆ ಆಗಿರುವುದರಿಂದ ನದಿಯಲ್ಲಿ ನೀರಿನ ಪ್ರವಾಹವೂ ಇಳಿಮುಖವಾಗಲಿದೆ ಎಂದು ಹೇಳಲಾಗಿದೆ.

ತುಂಬಿ ಹರಿಯುತ್ತಿರುವ ತುಂಗಭದ್ರಾ ನದಿ ನೋಡಲು ನಂದಿಗುಡಿ ಸೇತುವೆ ಮತ್ತು ಹರಿಹರ ಸೇತುವೆ ಬಳಿ ಸಾವಿರಾರು ಜನರು ಆಗಮಿಸಿದ್ದರು.

**ಅಧಿಕಾರಿಗಳ ಭೇಟಿ :** ಎರಡು ಪ್ರಮುಖ ರಸ್ತೆ ಸಂಪರ್ಕಗಳನ್ನು ಕಳೆದುಕೊಂಡಿರುವ ಉಕ್ಕಡಗಾತ್ರಿಗೆ ಶುಕ್ರವಾರ ಉಪತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಆನಂದ್ ತೀರ್ಥ ಅವರು ಭೇಟಿ ನೀಡಿ (3ನೇ ಪುಟಕ್ಕೆ)

## ಮಳೆ ಹಾನಿ: 500 ಕೋಟಿ ರೂ. ಬಿಡುಗಡೆಗೆ ಆದೇಶ

ಬೆಂಗಳೂರು, ಜು. 15 - ಮಳೆ ಹಾಗೂ ನೆರೆ ಹಾವಳಿಯಿಂದ ಹಾಳಾಗಿರುವ ರಸ್ತೆ, ಸೇತುವೆ, ಶಾಲಾ ಕಟ್ಟಡ, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಐದು ನೂರು ಕೋಟಿ ರೂ.ಗಳನ್ನು ಇಂದು (3ನೇ ಪುಟಕ್ಕೆ)

## ಕೇಂದ್ರದಿಂದ 2.5 ಲಕ್ಷ ಟನ್ ಈರುಳ್ಳಿ ಖರೀದಿ

ನವದೆಹಲಿ ಜು. 15 – 2022-23ರ ಸಾಲಿನಲ್ಲಿ ಈರುಳ್ಳಿಯ ದಾಸ್ತಾನಿಗಾಗಿ ಕೇಂದ್ರ ಸರ್ಕಾರ 2.5 ಲಕ್ಷ ಟನ್ ಖರೀದಿ ಮಾಡಲಿದೆ. ಮಾರುಕಟ್ಟೆಯಲ್ಲಿ ಈರುಳ್ಳಿ ದರ ಹೆಚ್ಚಾದರೆ ಈ ಈರುಳ್ಳಿಯನ್ನು ಮಾರುಕಟ್ಟೆಗೆ ಬಿಡಲಾಗುವುದು. (4ನೇ ಪುಟಕ್ಕೆ)




## ಕೈಲಾಸ ಶಿವಗಣಾರಾಧನೆ

ದಾವಣಗೆರೆ ಸಿಟಿ ಶಾಮನೂರು ವಾಸಿ
ಬಿಂದಪ್ಪ ಶ್ರೀಮತಿ ಗೌರಮ್ಮ ಸಿದ್ದಬಸಪ್ಪ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ 9.7.2022ನೇ ಶನಿವಾರ ಬೆಳಿಗ್ಗೆ 11.20ಕ್ಕೆ
ನನ್ನ ಪೂಜ್ಯ ಪತಿಯವರಾದ
**ಬಿಂದಪ್ಪ ಶ್ರೀ ಸಿದ್ದಬಸಪ್ಪನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 17.7.2022ನೇ ಭಾನುವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಆಂಜನೇಯ ಸಮುದಾಯ ಭವನ, ಶಾಮನೂರು, ದಾವಣಗೆರೆ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಬಿಂದಪ್ಪ ಶ್ರೀಮತಿ ಗೌರಮ್ಮ ಸಿದ್ದಬಸಪ್ಪ ಮತ್ತು ಮಕ್ಕಳು
ಬಿಂದಪ್ಪ ಶ್ರೀಮತಿ ನಿರ್ಮಲ, ಶ್ರೀ ಓಂಕಾರಪ್ಪ ಮತ್ತು ಸಹೋದರಿಯರು, ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಬಿಂದಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು.
**ಮೊ: 90085-40391, 96323-33069**

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.






# ಹರಿಹರ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಅಬ್ದುಲ್ ಹಾದಿ



ಮಲೇಬೆನ್ನೂರು, ಜು.15- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸಿ.ಬಿ.ಅಬ್ದುಲ್ ಹಾದಿ ಅವರು ಗುರುವಾರ ಹರಿಹರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಕಮಲಾಪುರದ ಎನ್. ರುದ್ರಪ್ಪ ನಾಗಪ್ಪನವರ್ ಅವರೂ ಅವಿರೋಧವಾಗಿ ಆಯ್ಕೆಯಾದರು.

ಸಹಕಾರ ಅಭಿವೃದ್ಧಿ ಅಧಿಕಾರಿ ಸುನೀತಾ ಅವರು ಚುನಾವಣಾಧಿಕಾರಿಯಾಗಿದ್ದರು. ವಾಸನದ ಟಿ.ಬಸವರಾಜಪ್ಪ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ಹಿರಿಯ ಮುಖಂಡ ಎನ್.ಜಿ.ನಾಗನಗೌಡ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಸಿರಿಗೆರೆ ಪರಮೇಶ್ವರಗೌಡ, ಮಿಟ್ಲಕಟ್ಟೆ ಚಂದ್ರಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಹಾಲೇಶಪ್ಪ, ಭಾನುವಳ್ಳಿ ಕೊಟ್ರಪ್ಪ ಸೇರಿದಂತೆ ಟಿಎಪಿಸಿಎಂಎಸ್‌ನ ನಿರ್ದೇಶಕರು ಈ ವೇಳೆ ಹಾಜರಿದ್ದರು.

# ಪಿಂಚಣಿ, ಮೂಲಭೂತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ

## 'ಶಾಸಕರ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ



ಹರಪನಹಳ್ಳಿ, ಜು.15- ಸಾರ್ವಜನಿಕರ ಪಿಂಚಣಿ, ಮೂಲಭೂತ ಸಮಸ್ಯೆಗಳನ್ನು ಖುದ್ದಾಗಿ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಅಧಿಕಾರಿಗಳಿಂದ ಸ್ಪಷ್ಟನೆ ಹಾಗೂ ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಪ್ರತಿ ಗ್ರಾ.ಪಂ. ಮಟ್ಟದಲ್ಲಿ ಒಂದೊಂದು ದಿನ ಸಭೆ ನಡೆಸಲಾಗುವುದು ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ಹಲವಾಗಲು ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಶಾಸಕರ ನಡೆ ಹಳ್ಳಿ ಕಡೆ' ಎಂಬ ಶಾಸಕರ ಭೇಟಿ ಕಾರ್ಯ ಕ್ರಮದಲ್ಲಿ ಗ್ರಾಮದ ವಿವಿಧ ವಾರ್ಡ್‌ಗಳಿಗೆ ತೆರಳಿ ಜನರ ಸಮಸ್ಯೆಗಳನ್ನು ಆಲಿಸಿದರು.

ಈ ವೇಳೆ ಉದ್ಯೋಗ ಖಾತರಿಯಲ್ಲಿ ಅಂಗವಿಕಲರಿಗೆ ಕೆಲಸ ನೀಡದಿರುವುದು, ಎಸ್.ಟಿ.ಕಾಲೋನಿಯಲ್ಲಿ ಕುಡಿಯುವ ನೀರಿಗಾಗಿ ಓವರ ಹೆಡ್ ಟ್ಯಾಂಕ್ ಸ್ಥಾಪನೆ, ಚರಂಡಿ, ಮನೆಗಳ ನಿರ್ಮಾಣಕ್ಕೆ ಸ್ಥಳದ ಅಭಾವ, ಸೇರಿದಂತೆ ಇತರೆ ಸಮಸ್ಯೆಗಳನ್ನು ಸ್ಥಳೀಯರು ದೂರಿದರು. ಇದಕ್ಕೆ ಶಾಸಕರು ಸ್ಥಳದಲ್ಲಿದ್ದ ತಾ.ಪಂ. ಅಧಿಕಾರಿ ಹಾಗೂ ಪಿಡಿಓ ಅವರಿಗೆ ಸ್ಪಷ್ಟನೆ ಕೇಳಿ, ಕೂಡಲೇ ಇದನ್ನು ಬಗೆಹರಿಸುವಂತೆ ಹೇಳಿದರು.

ನಂತರ ಪರಿಶಿಷ್ಟ ಪಂಗಡದ ಓಣಿಯಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ಮಾಡಿದರು. ನಿವಾಸಿಗಳೊಂದಿಗೆ ಚರ್ಚಿಸಿದ ಬಳಿಕ ಸ್ಥಳ ಖಾಸಗಿಯವರಿಗೆ ಸಂಬಂಧಪಟ್ಟಿರುವುದರಿಂದ ಅವರ ಒಪ್ಪಿಗೆ ಪಡೆದು ಟ್ಯಾಂಕ್ ನಿರ್ಮಾಣಕ್ಕೆ ಮುಂದಾಗಿ ಎಂದು ಅಧಿಕಾರಿಗೆ ಸೂಚಿಸಿದರು.

ಇದೇ ವೇಳೆ ತಾ.ಪಂ. ಮಾಜಿ ಸದಸ್ಯ ದನಕಾವರ ಸೋಮಲಿಂಗಪ್ಪ ಅವರು, ಬಹುಗ್ರಾಮ ಯೋಜನೆಯಲ್ಲಿ ಗ್ರಾಮಕ್ಕೆ ಕುಡಿಯುವ ನೀರು ಸಮರ್ಪಕವಾಗಿ ಬರುತ್ತಿಲ್ಲ, ಈ ಬಗ್ಗೆ ಹಲವಾರು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಸಮಸ್ಯೆ ಬಗೆಹರಿದಿಲ್ಲ ಎಂದು ಶಾಸಕರನ್ನು ಪ್ರಶ್ನಿಸಿದಾಗ, ಸ್ಥಳದಲ್ಲಿದ್ದ ಎಇಇ ಸಿದ್ದರಾಜು ಅವರಿಗೆ ಕರೆದು ಈ ಸಮಸ್ಯೆ ಶೀಘ್ರ ಬಗೆಹರಿಸುವಂತೆ ಹೇಳಿದರು.

ರೈತರಿಗೆ ಯೂರಿಯಾ ಗೊಬ್ಬರ ಪಡೆ ಯುವಾಗ ಮತ್ತೊಂದು ಔಷಧಿ ಪಡೆಯುವಂತೆ ಅಂಗಡಿಗಳಲ್ಲಿ ಒತ್ತಾಯಿಸುತ್ತಾರೆ, ಅಲ್ಲದೆ ಖಾಸಗಿ ಅಂಗಡಿ ಮಾಲೀಕರು ತಮಗೆ ಮನ ಬಂದಂತೆ ದರ ಪಡೆಯುತ್ತಾರೆ ಎಂದು ಶಾಸಕರ ಬಳಿ ರೈತರು ಆರೋಪಿಸಿದರು. ಸ್ಥಳದಲ್ಲಿದ್ದ ಕೃಷಿ ಸಹಾಯಕ ನಿರ್ದೇಶಕರು ಈಗಾಗಲೇ ಕುಂಚೂರು ಗ್ರಾಮದಲ್ಲಿನ ಗೊಬ್ಬರದ ಅಂಗಡಿಯವರಿಗೆ ನೋಟಿಸ್ ನೀಡಿ ಎಚ್ಚರಿಕೆ ನೀಡಲಾಗಿದೆ. ಇದೇ ರೀತಿ ದೂರುಗಳು ಬಂದಲ್ಲಿ ಅಂತವರ ವಿರುದ್ಧ ಕ್ರಮವಹಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

ನಂತರ ಪಂಚಾಯಿತಿ ವ್ಯಾಪ್ತಿಯಲ್ಲಿನ ಗರ್ಭಗುಡಿ, ಗರ್ಭಗುಡಿ ತಾಂಡಾ, ಒಳತಾಂಡಾ, ಕಣಿವೆ ಗ್ರಾಮಗಳಿಗೆ ತೆರಳಿ ವಾರ್ಡ್, ಓಣಿಗಳಲ್ಲಿ ಸಂಚರಿಸಿ ಸಮಸ್ಯೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ಇಓ ಪ್ರಕಾಶನಾಯ್ಕ, ಬಿಇಓ ಯು. ಬಸವರಾಜಪ್ಪ, ಎಇಇ ಸಿದ್ದರಾಜ, ಕೃಷಿ ಸಹಾಯಕ ನಿರ್ದೇಶಕ ಗೊಂದಿ ಮಂಜುನಾಥ, ತೋಟಗಾರಿಕೆ ಸಹಾಯಕ ನಿರ್ದೇಶಕ ಜಯಸಿಂಹ, ತೆಲಿಗಿ ಬೆಸ್ಕಾಂ ಎಇಇ ಜಯ್ಯಪ್ಪ, ಬಿಜೆಪಿ ಎಸ್.ಟಿ. ಘಟಕದ ತಾಲ್ಲೂಕು ಅಧ್ಯಕ್ಷ ಟಿ.ಮನೋಜ್, ಪುರಸಭೆ ಸದಸ್ಯರಾದ ರೊಕ್ಕಪ್ಪ, ಎಂ.ಕೆ ಜಾವೀದ್, ಮಾಜಿ ಗ್ರಾ.ಪಂ. ಅಧ್ಯಕ್ಷ ದ್ಯಾಮಪ್ಪ, ಮುಖಂಡರಾದ ವಿಷ್ಣುವರ್ಧನ, ಕಲ್ಲೇರ ಬಸವರಾಜ, ಆರ್.ಲೋಕೇಶ್, ಬಾಗಳಿ ಕೊಟ್ರೇಶಪ್ಪ, ಹೇಮಂತಕುಮಾರ, ಗಿರಜ್ಜಿ ಪ್ರವೀಣ, ಎಂ.ಮಲ್ಲೇಶ್, ಕೆಂಗಳ್ಳಿಪ್ರಕಾಶ್, ಗುಂಡಿ ಮಂಜುನಾಥ, ಕಣಿವಿಹಳ್ಳಿ ಮಂಜುನಾಥ, ಪಿಡಿಓ ಆನಂದಕುಮಾರ, ಹಾಗೂ ಮತ್ತಿತರರಿದ್ದರು.

# ಮಲೇಬೆನ್ನೂರಿನಲ್ಲಿ ಏಕನಾಥೇಶ್ವರಿ ಪರವು





ಮಲೇಬೆನ್ನೂರು, ಜು. 15 – ಪಟ್ಟಣದ ಹರಳಹಳ್ಳಿ ರಸ್ತೆಯಲ್ಲಿರುವ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಉತ್ತಮ ಮಳೆ-ಬೆಳೆಗಾಗಿ ಪ್ರಾರ್ಥಿಸಿ ಶುಕ್ರವಾರ ಪರವು ಹಮ್ಮಿಕೊಳ್ಳಲಾಗಿತ್ತು.

ಏಕನಾಥೇಶ್ವರಿ ಹಾಗೂ ಕೋಡಿ ಮಾರೇಶ್ವರಿ, ಕಾಳಿಕಾಂಬ ದೇವತೆಗಳ ಸಮ್ಮುಖದಲ್ಲಿ ಪಡ್ಲಿಗಿ ತುಂಬಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಅನ್ನ ಸಂತರ್ಪಣೆ ನಡೆಯಿತು.

ಮಾಜಿ ಶಾಸಕ ಬಿ.ಪಿ. ಹರೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಸೇರಿದಂತೆ ಪುರಸಭೆ ಸದಸ್ಯರು ಪಟ್ಟಣದ ಮುಖಂಡರು, ದೇವಸ್ಥಾನಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ಇಂದು 'ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ' ಬುಳ್ಳಾಪುರದಲ್ಲಿ ಜಿಲ್ಲಾಧಿಕಾರಿಗಳು

ಕಂದಾಯ ಇಲಾಖೆಗೆ ಸಂಬಂಧಿಸಿದ ವಿವಿಧ ಸೇವೆಗಳು, ಯೋಜನೆಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಪ್ರತಿ ತಿಂಗಳು ಮೂರನೇ ಶನಿವಾರ ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇಂದು ಆನಗೋಡು ಹೋಬಳಿಯ ಬುಳ್ಳಾಪುರ ಗ್ರಾಮದಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಪಾಸಿಯವರ ಕಾರ್ಯಕ್ರಮವಿರುತ್ತದೆ.

ಉಳಿದಂತೆ ಎಲ್ಲಾ ತಾಲ್ಲೂಕುಗಳಲ್ಲಿ ತಹಶೀಲ್ದಾರರು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಗ್ರಾಮ ವಾಸ್ತವ್ಯ ಮಾಡುವರು. ಹರಿಹರ ತಾ; ಕಸಬಾ ಸತ್ಯನಾರಾಯಣಪುರ ಕ್ಯಾಂಪ್, ಚನ್ನಗಿರಿ ತಾ; ಬಸವಾಪಟ್ಟಣ-2 ರ ಕತ್ತಲಗೆರೆ, ಜಗಳೂರು ತಾ; ಕಸಬಾ ಅಣಬೂರು ಗ್ರಾಮದಲ್ಲಿ ವಾಸ್ತವ್ಯ ಮಾಡುವ ಮೂಲಕ ಜನರ ಕುಂದುಕೊರತೆಗಳನ್ನು ಆಲಿಸಿ ಪರಿಹರಿಸುವರು.

ಈ ವೇಳೆ ಕಂದಾಯ ಇಲಾಖೆ ಸೇವೆಗಳು, ಪೌತಿ ಖಾತೆ ಬದಲಾವಣೆ, ಸಾಮಾಜಿಕ ಭದ್ರತಾ ಯೋಜನೆಯಡಿ ಮಾಸಾಶನ, ಅತಿವೃಷ್ಟಿ, ಬರ ಪರಿಹಾರ, ಪಡಿತರ ಚೀಟಿ, ಪಹಣಿ ತಿದ್ದುಪಡಿ ಸೇರಿದಂತೆ ಇನ್ನಿತರೆ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಮಾಡಿಕೊಳ್ಳಬೇಕು.

ಹೊನ್ನಾಳಿ ತಾಲ್ಲೂಕು ಕಸಬಾ ಕಮ್ಮಾರಘಟ್ಟೆ ಹಾಗೂ ನ್ಯಾಮತಿ ತಾಲ್ಲೂಕಿನ ಬೆಳಗುತ್ತಿ ಹೋಬಳಿಯ ಕುಂಕುವಾ ಗ್ರಾಮದಲ್ಲಿ ಜುಲೈ 16ರ ಮೂರನೇ ಶನಿವಾರದ ಬದಲಾಗಿ ಜುಲೈ 23 ರ ನಾಲ್ಕನೇ ಶನಿವಾರ ಗ್ರಾಮ ವಾಸ್ತವ್ಯ ನಡೆಯಲಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಶೇ.5ರಷ್ಟು ಜಿಎಸ್‌ಟಿ ವಿಧಿಸಿದ್ದಕ್ಕೆ ವಿರೋಧ



(1ನೇ ಪುಟದಿಂದ) ವಹಿವಾಟನ್ನು ಬಂದ್ ಮಾಡಲಿದ್ದಾರೆ ಎಂದು ಜಿಲ್ಲಾ ಅಕ್ಕಿ ಗಿರಣಿದಾರರ ಸಂಘದ ಕಾರ್ಯದರ್ಶಿ ಕೋಗುಂಡಿ ಬಕ್ಕೇಶಪ್ಪ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಸುಮಾರು 80ಕ್ಕೂ ಹೆಚ್ಚು ಅಕ್ಕಿ ಗಿರಣಿಗಳನ್ನು ಬಂದ್ ಮಾಡಲಾಗಿದೆ. ಅಲ್ಲದೇ ಸಗಟು ವ್ಯಾಪಾರಿಗಳೂ ಸಹ ತಮ್ಮ ವಹಿವಾಟು ನಿಲ್ಲಿಸಿದ್ದಾರೆ. ಜಿಎಸ್‌ಟಿ ರದ್ದುಪಡಿಸುವಂತೆ 15 ದಿನಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಿದ್ದೇವೆ. ಆದರೆ, ಇದಕ್ಕೆ ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಎರಡು ದಿನಗಳ ಕಾಲ ಅಕ್ಕಿ ಗಿರಣಿ ಬಂದ್ ಮಾಡುವ ಮೂಲಕ ಶಾಂತಿಯುತ ಹೋರಾಟ ಮಾಡುತ್ತಿದ್ದೇವೆ. ಇದಕ್ಕೂ ಸರ್ಕಾರ ಸ್ಪಂದಿಸದಿದ್ದರೆ ರಾಜ್ಯ ಮಟ್ಟದಲ್ಲಿ ಸಭೆ ನಡೆಸಿ ಮುಂದಿನ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಜಿಲ್ಲೆಯಲ್ಲಿನ ಅಕ್ಕಿ ಗಿರಣಿಗಳಲ್ಲಿ ಸುಮಾರು 2400 ಕಾರ್ಮಿಕರಿದ್ದಾರೆ. ಒಂದು ಅಕ್ಕಿ ಗಿರಣಿಯಲ್ಲಿ ಕನಿಷ್ಟ ಅಂದರೆ ಮೂರು ಲಾರಿಗಳಿಗೆ ಕೆಲಸ ಇರುತ್ತದೆ. ಅದನ್ನು ನಂಬಿಕೊಂಡು ಹಮಾಲಿಗಳು, ವರ್ತಕರು ಇದ್ದು, ಅವರೆಲ್ಲರೂ ನಮಗೆ ಬೆಂಬಲ ನೀಡಿದ್ದಾರೆ. ಅದರ ಜೊತೆಗೆ ಜಿಲ್ಲಾ ವಾಣಿಜ್ಯ ಹಾಗೂ ಕೈಗಾರಿಕೆಗಳ ಒಕ್ಕೂಟ ಬೆಂಬಲ ನೀಡಿದೆ ಎಂದರು.

**ಡಿಸಿ, ಸಂಸದರಿಗೆ ಮನವಿ :** ಆಹಾರ ಧಾನ್ಯಗಳ ಮೇಲೆ ಶೇ.5ರಷ್ಟು ಸರಕು ಮತ್ತು ಸೇವಾ ತೆರಿಗೆ ವಿಧಿಸಿರುವುದನ್ನು ಖಂಡಿಸಿ ಶುಕ್ರವಾರ ಜಿಲ್ಲಾ ಅಕ್ಕಿ ಗಿರಣಿದಾರರು, ಸಗಟು ವ್ಯಾಪಾರಿಗಳು ಜಿಲ್ಲಾ ಅಕ್ಕಿ ಗಿರಣಿದಾರರ ಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಮತ್ತು ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ನಂದಿಗಾವಿ ರಾಜಗೋಪಾಲ್ ರೆಡ್ಡಿ, ಅಂಗಡಿ ಚಂದ್ರಣ್ಣ, ಮಲೇಬೆನ್ನೂರು ಚಿದಾನಂದ, ಎಕ್ಕನಹಳ್ಳಿ ಬಸವರಾಜ್, ಅನಿಲ್ ಕುಮಾರ್ ಸಿಂಗ್, ಜಯಪ್ರಕಾಶ್ ಮಾಗಿ, ಬಾಳೆಹೊಲದ ಸಿದ್ದಣ್ಣ, ರಾಜಣ್ಣ ಕಡೇಕೊಪ್ಪ ಸೇರಿದಂತೆ ಇತರರು ಇದ್ದರು.

# ಮೈಕ್ರೋ ಲ್ಯಾಬ್ಸ್ ವಿರುದ್ಧ ಪ್ರತ್ಯೇಕ ತನಿಖೆಗೆ ಔಷಧ ಇಲಾಖೆಗೆ ಸೂಚನೆ

ನವದೆಹಲಿ, ಜು. 15 – ಜನಪ್ರಿಯವಾಗಿರುವ ಡೋಲೋ - 650 ಗುಳಿಗೆ ಉತ್ಪಾದಿಸುವ ಮೈಕ್ರೋ ಲ್ಯಾಬ್ಸ್ ಔಷಧ ಕಂಪನಿ ಅನುಚಿತ ಪದ್ಧತಿ ಹೊಂದಿದೆ ಎಂಬ ಆರೋಪಗಳ ಬಗ್ಗೆ ಪ್ರತ್ಯೇಕ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರದ ಔಷಧ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ವರದಿಯಾಗಿದೆ. ಮೈಕ್ರೋ ಲ್ಯಾಬ್ಸ್ ಕಂಪನಿಯು ಸುಮಾರು ಸಾವಿರ ಕೋಟಿ ರೂ.ಗಳ ಕೊಡುಗೆಗಳನ್ನು ವೈದ್ಯರು ಹಾಗೂ ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ನೀಡಿದೆ ಎಂಬ ಆರೋಪಗಳ ಬಗ್ಗೆ ಸಿ.ಬಿ.ಡಿ.ಟಿ. ತನಿಖೆ ನಡೆಸುತ್ತಿದೆ.

# ಕುಕ್ಕುವಾಡದಲ್ಲಿ ಇಂದು ಆಂಜನೇಯ ಸೌಹಾರ್ದ ಸಹಕಾರಿಯ ಮಹಾಸಭೆ



ಕುಕ್ಕುವಾಡದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿಯ2021-2022ನೇ ಸಾಲಿನ 25ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯು ಇಂದು ಮಧ್ಯಾಹ್ನ 3.30 ಕ್ಕೆ ಕುಕ್ಕುವಾಡದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷ ಜಿ.ಎಮ್. ರುದ್ರಗೌಡ್ರು ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಶ್ರೀ ಆಂಜನೇಯ ಪತ್ತಿನ ಸಹಕಾರ ಸಂಘ ಎಂಬುದಾಗಿ 1998ರಲ್ಲಿ ಜಿ. ಎಮ್. ರುದ್ರಗೌಡ್ರು ಅಧ್ಯಕ್ಷತೆಯಲ್ಲಿ ಈ ಸಂಘವು ಪ್ರಾರಂಭವಾಯಿತು. 06-01-2016ರಲ್ಲಿ ಈ ಸಂಘವು ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತವಾಗಿ ಪರಿವರ್ತನೆಗೊಂಡಿತು.

ಶ್ರೀ ಆಂಜನೇಯ ಸೌಹಾರ್ದ ಸಹಕಾರಿಯ ಕಾರ್ಯ ವ್ಯಾಪ್ತಿಯು ರಾಜ್ಯದ ಎಲ್ಲಾ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ಈ ಸಹಕಾರಿಯು ಆರು ಶಾಖೆಗಳನ್ನು ಹೊಂದಿದ್ದು, ಮುಖ್ಯ ಕಛೇರಿ ಕುಕ್ಕುವಾಡವನ್ನು ಹೊರತುಪಡಿಸಿ, ಹದಡಿ ಶಾಖೆ, ತ್ಯಾವಣಿಗೆ ಶಾಖೆ, ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಶಾಖೆ, ರಾಣೇಬೆನ್ನೂರು ತಾಲ್ಲೂಕಿನ ತುಮ್ಮಿನಕಟ್ಟೆ ಶಾಖೆ, ಹಾನಗಲ್ ತಾಲ್ಲೂಕಿನ ತಿಳವಳ್ಳಿ ಶಾಖೆ, ಹೊನ್ನಾಳಿ ಪಟ್ಟಣದಲ್ಲಿ ಶಾಖೆಗಳನ್ನು ಹೊಂದಿರುತ್ತದೆ. ಎಲ್ಲಾ ಶಾಖೆಗಳು ಗಣಕೀಕರಣಗೊಂಡಿವೆ.

ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತ ಕುಕ್ಕುವಾಡ ಇದರ ಕೇಂದ್ರ ಕಛೇರಿಯಾಗಿದ್ದು, 60 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡವನ್ನು ಹೊಂದಿರುತ್ತದೆ. ಈ ಮುಖ್ಯ ಕಛೇರಿಯು ಭದ್ರತಾ ಕೊಠಡಿಯನ್ನು ಒಳಗೊಂಡಿರುತ್ತದೆ. ಮತ್ತು ಲಾಕರ್ ಸೌಲಭ್ಯ ಹೊಂದಿರುತ್ತದೆ. ಸಹಕಾರಿಯ ಸದಸ್ಯರ ಮಕ್ಕಳು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರಿಕ್ಷೆಯಲ್ಲಿ ಶೇಕಡಾ 75 ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಹಕಾರಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಈ ಸಂಘವು 2021-2022ರಲ್ಲಿ ಸುಮಾರು 138.89 ಕೋಟಿ ರೂ. ವ್ಯವಹರಿಸಿರುತ್ತದೆ. ಸಹಕಾರಿಯು ಈಗಾಗಲೇ 227.22 ಲಕ್ಷ ರೂ. ಆಸ್ತಿಯನ್ನು ಹೊಂದಿರುತ್ತದೆ. ಈ ಸಹಕಾರಿಯು 2021-2022 ನೇ ಸಾಲಿನಲ್ಲಿ ರೂ.29.18 ಲಕ್ಷ ರೂ ನಿವ್ವಳ ಲಾಭ, ರೂ.19.79ಕೋಟಿ ದುಡಿಯುವ ಬಂಡವಾಳ ಹೊಂದಿರುತ್ತದೆ. ಪ್ರತೀ ವರ್ಷ ಲಾಭ ಗಳಿಸುತ್ತಾ ಬಂದಿದೆ ಎಂದು ರುದ್ರುಗೌಡ್ರು ವಿವರಿಸಿದ್ದಾರೆ.

# ಉದ್ದಬೋರನಹಳ್ಳಿಯಲ್ಲಿ ಇಂದು ವಿದ್ಯುತ್ ಅದಾಲತ್ ಕಾರ್ಯಕ್ರಮ

ಬೆಸ್ಕಾಂ ವತಿಯಿಂದ ಜಗಳೂರು ಉಪವಿಭಾಗದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆಗಳ ಬಗ್ಗೆ ಕುರಿತು ಪಲ್ಲಾಗಟ್ಟೆ ಶಾಖೆಯ ಉದ್ದಬೋರನಹಳ್ಳಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ನಡೆಯಲಿದೆ.

ಜಗಳೂರು ಉಪವಿಭಾಗೀಯ ಕಚೇರಿಯಲ್ಲಿ ಇದೇ ದಿನ ಮಧ್ಯಾಹ್ನ 3 ಕ್ಕೆ ಗ್ರಾಹಕರ ಸಂವಾದ ಸಭೆಯನ್ನು ಆಯೋಜಿಸಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

॥ ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಕನ್ನಮ್ಮದೇವಿ ಕೃಪ ॥

## ಕೈಲಾಸ ಸಮಾರಾಧನೆ ಆಹ್ವಾನ



ಹರಪನಹಳ್ಳಿ ತಾ॥ ತಾವರಗೊಂದಿ ಗ್ರಾಮದ

**ಶ್ರೀಮತಿ ಕರೇಗೌಡ್ರ ಅನ್ನಪೂರ್ಣಮ್ಮ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 09.07.2022ನೇ ಶನಿವಾರ ಬೆಳಿಗ್ಗೆ 8.00 ಗಂಟೆಗೆ ನನ್ನ ಪತಿಯವರಾದ

**ಶ್ರೀ ಕರೇಗೌಡ್ರ ಕೊಟ್ರಪ್ಪ**

ಜನನ : 01.01.1945, ನಿಧನ 09.07.2022

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಸಮಾರಾಧನೆ"ಯನ್ನು

ದಿನಾಂಕ : 17.07.2022ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗ ಮೃತರ ಸ್ವಗೃಹ ತಾವರಗೊಂದಿಯಲ್ಲಿ ನೆರವೇರಿಸಲು ಹಿರಿಯರು ನಿಶ್ಚಯಿಸಿರುವುದುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಕರೇಗೌಡ್ರ ಅನ್ನಪೂರ್ಣಮ್ಮ ಮತ್ತು ಮಕ್ಕಳು ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕರೇಗೌಡ್ರ ವಂಶಸ್ಥರು ಮತ್ತು ತಾವರಗೊಂದಿ ಗ್ರಾಮದ ಸಮಸ್ತ ಬಂಧು-ಮಿತ್ರರು.

## ಶ್ರೀಧರ್ ಶರ್ಮ ನಿಧನ



ದಾವಣಗೆರೆ ಮಹಾಲಕ್ಷ್ಮಿ ಲೇಔಟ್ ಕಾವೇರಿ ಅಪಾರ್ಟ್‌ಮೆಂಟ್ ವಾಸಿ ಶ್ರೀಧರ್ ಶರ್ಮ ಅವರು ದಿನಾಂಕ 15.7.2022ರ ಶುಕ್ರವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯ, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.7.2022ರ ಶುಕ್ರವಾರದಂದೇ ಸಂಜೆ 6.30ಕ್ಕೆ ನಗರದ ಪಿ.ಬಿ ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿತು.

## ಸ್ಕಾಲರ್ ಶಿಪ್‌ಗೆ ಅರ್ಜಿ

ದಾವಣಗೆರೆ, ಜು.14- ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ. 80 ಅಂಕ ಗಳಿಸಿರುವ ವಿದ್ಯಾರ್ಥಿನಿ ಯರಿಗೆ ಕರುಣಾ ಜೀವ ಕಲ್ಯಾಣ ಟ್ರಸ್ಟಿನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸಂಪರ್ಕಿಸಿ : 91104 55199.

**Finance Advisor**

Full Times Job's
Female & Male.
Job Role Marketing Executive
Work time : 9.30AM to 6.30 PM & every sunday holiday.
Salary : 9,000 to 11,000.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
**77959 44991**

## ಕಾರಿಗನೂರು ಬನ್ನಿಹಟ್ಟಿ ಓಂಕಾರಪ್ಪ ನಿಧನ



ದಾವಣಗೆರೆ ಕಾರಿಗನೂರು ವಾಸಿ

ಸಿಎಸ್‌ಡಿ-2, ಯುನಿಟ್-1, ಬೆಸ್ಕಾಂ ಅಧಿಕಾರಿ

**ಕಾರಿಗನೂರು ಬನ್ನಿಹಟ್ಟಿ ಓಂಕಾರಪ್ಪ**

ಇವರು ದಿನಾಂಕ 15.7.2022ರ ಶುಕ್ರವಾರ ಬೆಳಗಿನ ಜಾವ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.7.2022ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಕಾರಿಗನೂರಿನ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ- ಬನ್ನಿಹಟ್ಟಿ ವಂಶಸ್ಥರು

ಮೊ:72049 59851

## 11ನೇ ವರ್ಷದ ಪುಣ್ಯಸ್ಮರಣೆ



**ದಿ॥ ಹೆಚ್.ಆರ್. ರುದ್ರಪ್ಪ**

ಮರಣ : 16.07.2011

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,

ಮಗ : ಹೆಚ್.ಆರ್. ಹನುಮಂತಪ್ಪ, ಸೊಸೆ : ಮೀನಾಕ್ಷಿ

ಮೊಮ್ಮಕ್ಕಳು : ಹೆಚ್.ಹೆಚ್. ಬಿಂದು, ಹೆಚ್.ಹೆಚ್. ಮಂಜುನಾಥ್

ಮರಿಮೊಮ್ಮಗ: ಹೆಚ್.ಹೆಚ್. ಸಾಯಿಲಿಖಿತ್ ಹಾಗೂ ಬಂಧು-ಮಿತ್ರರು.

# ಹಡಗಲಿ ಪುರಸಭೆ ಉಪಾಧ್ಯಕ್ಷರಾಗಿ ತಿಮ್ಮಣ್ಣ



ಹೂವಿನಹಡಗಲಿ, ಜು.15 - ಆರ್.ನಿರ್ಮಲ ರವರ ರಾಜೀನಾಮೆಯಿಂದ ತೆರವಾಗಿದ್ದ ಪುರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 21 ನೇ ವಾರ್ಡಿಗೆ ಎರಡನೇ ಅವಧಿಗೆ ಆಯ್ಕೆಯಾಗಿರುವ ಎಸ್.ತಿಮ್ಮಣ್ಣ ಇವರು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಜೆ.ಮಲ್ಲಣ್ಣ ಮುಖ್ಯಾಧಿಕಾರಿ ಹೆಚ್. ಇಮಾಮ್ ಸಾಬ್ ಹಾಗೂ ಸದಸ್ಯರು ಹಾಜರಿದ್ದರು.

# ಭರಮಸಾಗರದಲ್ಲಿ ಲಸಿಕಾ ಮೇಳ



ಭರಮಸಾಗರ, ಜು.15- ಕಾಲಗೆರೆ ಗ್ರಾಮದ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕಾ ಮೇಳ ನಡೆಸಲಾಯಿತು. 18 - 59 ವರ್ಷದ ಒಳಗಿನವರಿಗೆ ಉಚಿತವಾಗಿ ವ್ಯಾಕ್ಸಿನ್ ಹಾಕಲಾಯಿತು. ಕೋವಿಶೀಲ್ಡ್ - 49, ಕೋವ್ಯಾಕ್ಸಿನ್ - 113 ಒಟ್ಟು 162 ಜನರಿಗೆ ಲಸಿಕೆ ಹಾಕಲಾಯಿತು. ಈ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಗಳಾದ ಆಂಜನಪ್ಪ, ವಿನಯ ಸಿಂಧೆ, ರಜಿಯಾ ಬೇಗಂ, ಸುಶೀಲ ಹಾಗೂ ಆಶಾ ಕಾರ್ಯಕರ್ತೆಯರಾದ ಶೈಲಾ, ಗಂಗಾಂಬಿಕೆ, ವಿಶಾಲಾಕ್ಷಿ ಇದ್ದರು.

# ಅಪಾಯಮಟ್ಟ ಮೀರಿ ಹರಿಯುತ್ತಿರುವ ನದಿ

## ಸಂತ್ರಸ್ತ ಕುಟುಂಬಗಳಿಗೆ ಆಹಾರದ ವ್ಯವಸ್ಥೆ ತಹಶೀಲ್ದಾರ್ ರಶ್ಮಿ



ಹೊನ್ನಾಳಿ, ಜು. 15- ತಾಲ್ಲೂಕಿನ ಮಧ್ಯಭಾಗದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಯಲ್ಲಿ ನೀರು ಅಪಾಯಮಟ್ಟ ಮೀರಿ ಹರಿದು ಬರುತ್ತಿದೆ.

ನಗರದ ಬಂಬೂಬಜಾರ್ ಭಾಗದವರೆಗೂ ಮತ್ತು ಅಗ್ರಹಾರ ಬಳಿ ಇರುವ ಸರ್.ಎಂ.ವಿಶ್ವೇಶ್ವರಯ್ಯ ಹಿರಿಯ ಪ್ರಾಥಮಿಕ ಶಾಲೆ ಒಳಗೆ ಮತ್ತು ಮೈದಾನ ತುಂಬಾ ನೀರು ನಿಂತಿದೆ.

ಬಾಲರಾಜ್‌ಘಾಟಿನ 15 ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಅಲ್ಲಿನ 18 ಕುಟುಂಬಗಳ 102 ನಿವಾಸಿಗಳಿಗೆ ಅಂಬೇಡ್ಕರ್ ಭವನದಲ್ಲಿ ಕಾಳಜಿ ಕೇಂದ್ರ ಸ್ಥಾಪಿಸಿ, ಅವರಿಗೆ ಆಹಾರದ ವ್ಯವಸ್ಥೆಯನ್ನು ತಾಲ್ಲೂಕು ಆಡಳಿತದಿಂದ ಮಾಡಲಾಗಿದೆ ಎಂದು ತಹಶೀಲ್ದಾರ್ ರಶ್ಮಿ ಹೇಳಿದರು.


ತಾಲ್ಲೂಕಿನ ಚೀಲೂರು, ಹಳೇ ಮಳಲಿ, ಸಾಸ್ವೆಹಳ್ಳಿ, ಬೆನಕನಹಳ್ಳಿ ಗೊಲ್ಲರಹಳ್ಳಿ, ಹೊನ್ನಾಳಿ, ಬೇಲಿಮಲ್ಲೂರು, ಕೋಟೆಮಲ್ಲೂರು, ಚಿಕ್ಕಗೋಣಿಗೆರೆ, ಹಿರೇಗೋಣಿಗೆರೆ ಗ್ರಾಮಗಳ ಮತ್ತು ಬಲಮರಿ ಗ್ರಾಮದ ಹಳ್ಳದ ಪ್ರದೇಶದಲ್ಲಿ ನೀರು ನುಗ್ಗಿದೆ. ಯಾವುದೇ ಹಾನಿ ಆಗಿರುವ ಬಗ್ಗೆ ವರದಿಯಾಗಿಲ್ಲ.

**ತಾಲ್ಲೂಕಿನ ನಾಲ್ಕು ಮನೆಗಳಿಗೆ ಭಾಗಶಃ ಹಾನಿ :** ತಾಲ್ಲೂಕಿನ ಮುಕ್ತೇನಹಳ್ಳಿ 1 ಮನೆ, ಕಮ್ಮಾರಗಟ್ಟೆ 3 ಮನೆ, ಕುಳಗಟ್ಟೆ 2 ಮನೆಗಳು ಭಾಗಶಃ ಹಾನಿಯಾಗಿ 3 ಲಕ್ಷದಷ್ಟು ನಷ್ಟ ಉಂಟಾಗಿದೆ.

ಹೊನ್ನಾಳಿ ಪಟ್ಟಣದ ನದಿ ಪಾತ್ರದಲ್ಲಿರುವ ಸಾರ್ವಜನಿಕರನ್ನು ಮತ್ತು ಗ್ರಾಮೀಣ ಭಾಗದಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ ನದಿ ತೀರದಲ್ಲಿರುವ ಗ್ರಾಮಸ್ಥರು ನದಿ ಪಾತ್ರಕ್ಕೆ ಹೋಗಬಾರದು ಎಂದು ಟಾಂ ಟಾಂ ಹೊಡಿಸಲಿಕ್ಕೆ ತಾ.ಪಂ. ಇಓ ಅವರಿಗೆ ಸೂಚಿಸಲಾಗಿದೆ ಎಂದ ಅವರು, ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ, ಮಳೆಯಿಂದ ಸದ್ಯ ಯಾವುದೇ ಸಾವು - ನೋವುಗಳಾಗಿಲ್ಲ.

ಹೊನ್ನಾಳಿ ತುಂಗಭದ್ರಾ ನದಿ ನೀರಿನ ಮಟ್ಟ 11.500 ಮೀಟರ್‌ನಷ್ಟಿದೆ ಅಪಾಯಮಟ್ಟ ಮೀರಿ ಹೆಚ್ಚಾಗಿ ಹರಿದು ಬರುತ್ತಿದೆ.

# ಪಂಚ ಪೀಠಗಳಿಂದ ಸಂಸ್ಕೃತಿ, ಸಂಸ್ಕಾರ ಉಳಿಸಿ, ಬೆಳೆಸುವ ಕಾರ್ಯ ನಿರಂತರ



## ಹರಿಹರ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್

ಹರಿಹರ, ಜು. 12 - ಪಂಚಪೀಠದ ಜಗದ್ಗುರುಗಳವರು ನಗರಕ್ಕೆ ಆಗಮಿಸು ತ್ತಾರೆ ಎಂದರೆ ಭಕ್ತರಲ್ಲಿ ಹುರುಪು, ಹುಮ್ಮಸ್ಸು ಹೆಚ್ಚು ಬರುತ್ತಿತ್ತು. ಆದರೆ ಇತ್ತೀಚೆಗೆ ಧರ್ಮಕ್ಕೊಂದು ಪೀಠವನ್ನು ಸ್ಥಾಪಿಸಿದ ನಂತರ ಸಮಾಜವು ಅಧೋಗತಿ ಯತ್ತ ಸಾಗುತ್ತಿದೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೇಳಿದರು.

ನಗರದ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದಲ್ಲಿ ನಿನ್ನೆ ನಡೆದ ಆಷಾಢ ಮಾಸದ ಇಷ್ಟಲಿಂಗ ಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಕೇದಾರ ಪೀಠದ ಜಗದ್ಗುರುಗಳು ಮತ್ತು ರಂಭಾಪುರಿ ಜಗದ್ಗುರುಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದನ್ನು ನೋಡಿ ಹರಿಹರ ಜನರು ಪಾವನರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಜಗತ್ತಿನಲ್ಲಿ ಜಾತಿ ಎಂಬುದು ಬಹಳ ಜನರ ಮನಸ್ಸಿನಲ್ಲಿ ಅಂಟಿಕೊಂಡಿದೆ.

ಪಂಚಪೀಠದ ಜಗದ್ಗುರುಗಳಿಂದ ಪೀಠದ ಸಂಸ್ಕೃತಿ, ಸಂಸ್ಕಾರ ಉಳಿಸಿ, ಬೆಳೆಸುವ ಕಾರ್ಯ ನಿರಂತರವಾಗಿ ಸಾಗುತ್ತಿದೆ ಎಂದರು.

1997ರಲ್ಲಿ ನಗರದಲ್ಲಿ ಯುಗಮಾನೋತ್ಸವ ನಡೆದಂತೆ, ಒಂದೇ ವೇದಿಕೆಯಲ್ಲಿ ಎಲ್ಲಾ ಪಂಚಪೀಠದ ಶ್ರೀಗಳು ಪಾಲ್ಗೊಳ್ಳುವ ಕಾರ್ಯ ಆಗುವುದಕ್ಕೆ ಅವಕಾಶ ಕಲ್ಪಿಸುವ ಕಾರ್ಯ ಆಗಬೇಕು. ಇದಕ್ಕೆ ನಾನು ಎಲ್ಲಾ ರೀತಿಯ ಸಹಕಾರ ನೀಡುವುದರ ಜೊತೆಗೆ ಅದ್ಭುತ ಕಾರ್ಯವನ್ನು ಮಾಡಿ ತೋರಿಸುವುದಾಗಿ ಭರವಸೆ ನೀಡಿದರು.

ರಾಣೇಬೆನ್ನೂರು ಶಾಸಕ ಅರುಣ್ ಕುಮಾರ್ ಪೂಜಾರ್ ಮಾತನಾಡಿ, ಪುರಾತನ ಕಾಲದಿಂದಲೂ ಆಷಾಢ ಮಾಸದಲ್ಲಿ ಇಷ್ಟಲಿಂಗ ಪೂಜೆ ನಡೆಯುತ್ತಾ ಬಂದಿದೆ. ಈವಾಗ ಮತ್ತೆ ಮಾಡುತ್ತಿರುವುದರಿಂದ ಭಕ್ತರಲ್ಲಿ ಸಂತಸ ತರಿಸಿದೆ ಎಂದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಮಾತನಾಡಿ, ಆಷಾಢ ಮಾಸದ ಪೂಜಾ ಕಾರ್ಯಕ್ರಮ ಮೊದಲಿನಿಂದಲೂ ರಂಭಾಪುರಿ ಜಗದ್ಗುರು, ಶ್ರೀ ಗಂಗಾಧರ ಸ್ವಾಮಿಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆದುಕೊಂಡು ಬಂದಿತ್ತು. ನಡುವೆ ಕೊರೊನಾ ಸಮಯದಲ್ಲಿ ಸ್ಥಗಿತಗೊಂಡ ಕಾರ್ಯಕ್ರಮವನ್ನು ಮತ್ತೆ ಮಾಡುತ್ತಿರುವುದು ಶ್ಲಾಘ್ಯನೀಯ ಕಾರ್ಯವಾಗಿದೆ. ಮಾನವ ಧರ್ಮಕ್ಕೆ ಜಯವಾಗಲಿ ಎಂದು ಎಲ್ಲಾ ವರ್ಗದ ಜನರ ಒಳಿತಿಗಾಗಿ ಪಂಚಪೀಠಗಳು ಶ್ರಮಿಸುತ್ತಿವೆ. ಅಂತಹ ಮಹತ್ವದ ಕಾರ್ಯಕ್ರಮ ನಿರಂತರವಾಗಿ, ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸುವೆ ಎಂದು ಹೇಳಿದರು.

ಈ ವೇಳೆ ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಶೇಖರಗೌಡ, ಆರ್.ಮಂಜುನಾಥ್, ಎಂ.ಆರ್. ಚಂದ್ರ ಶೇಖರ್, ಚಂದ್ರಶೇಖರ್ ಕುಂಬಾರ, ಹೆಚ್.ಸಿ. ಕೀರ್ತಿ ಕುಮಾರ್, ನಗರಸಭೆಯ ಆರೋಗ್ಯ ಇಲಾಖೆಯ ರವಿಪ್ರಕಾಶ್ ಸೇರಿದಂತೆ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ರಂಭಾಪುರಿ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಕೋಡಿಯಾಲ ಹೊಸಪೇಟೆಯಲ್ಲಿ ಶ್ರೀ ಜಗದೀಶ್ವರ ಸ್ವಾಮಿಗಳು, ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು, ಮಳಲಿ ಮಠದ ಶ್ರೀ ನಾಗಭೂಷಣ ಸ್ವಾಮೀಜಿ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಕೊಂಡಜ್ಜಿ ಈಶ್ವರಪ್ಪ, ಜುಂಜಪ್ಪ ಹೆಗ್ಗಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಮಹಾದೇವಪ್ಪ ಗೌಡ್ರು, ವಜ್ರೇಶ್, ಎನ್.ಇ. ಸುರೇಶ್, ಹಾಲಸ್ವಾಮಿ ಗುತ್ತೂರು, ಪಂಚಾಕ್ಷರಿ ಕೆ.ಟಿ. ಪ್ರಕಾಶ್, ರಾಚಪ್ಪ, ಮೂರ್ಕಲ್ ಜಯ್ಯಣ್ಣ, ಹಾಸಬಾವಿ ಮನೋಹರ್ ಇತರರಿದ್ದರು.

# ಮಳೆ ಹಾನಿ: 500 ಕೋಟಿ ರೂ. ಬಿಡುಗಡೆಗೆ ಆದೇಶ

**(1ನೇ ಪುಟದಿಂದ)** ಬಿಡುಗಡೆ ಮಾಡಿ ಆದೇಶ ಹೊರಡಿಸಿದ್ದಾರೆ.

ದೇವನಹಳ್ಳಿ ಸಮೀಪ ಪಕ್ಷ ಹಮ್ಮಿಕೊಂಡಿರುವ ಚಿಂತನ ಮಂಥನ ಸಭೆಯ ಮಧ್ಯೆಯೇ ನೆರೆ ಪೀಡಿತ ಜಿಲ್ಲಾಡಳಿತದೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ, ಪರಿಸ್ಥಿತಿಯ ಅವಲೋಕನ ಮಾಡಿದ ನಂತರ ಹಣ ಬಿಡುಗಡೆ ಮಾಡಲು ನಿರ್ಧರಿಸಿದರು.

ಬಿಳಿ ಹಾಳೆಯಲ್ಲಿ ಸರ್ಕಾರಿ ಸಂಖ್ಯೆ ಹಾಕಿ ತಮ್ಮ ಕೈಬರಹದಿಂದಲೇ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದು ಒಂದು ಅಪರೂಪದ ಆದೇಶ ಹೊರಡಿಸಿದರು.

ಪಂಚತಾರಾ ಹೋಟೆಲ್‌ನಲ್ಲಿ ಕುಳಿತು ಸಭೆ ಮಾಡಿ, ಅಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳದೆ, ಕೈಬರಹದಲ್ಲಿ ಈ ದೊಡ್ಡ ಪ್ರಮಾಣದ ಹಣ ಬಿಡುಗಡೆಗೊಳಿಸುವಂತೆ ಆದೇಶಿಸಿದರು. ಕಳೆದ ಕೆಲ ದಿನಗಳಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸತತವಾಗಿ ಮಳೆ ಸುರಿಯುತ್ತಿದೆ. ಇದರಿಂದ ಹಲವಾರು ಜಿಲ್ಲೆಗಳಲ್ಲಿ ಸಮಸ್ಯೆಯಾಗಿದೆ.

ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ, ಶಾಲೆ, ಅಂಗನವಾಡಿ, ವಿದ್ಯುತ್ ಕಂಬ, ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳು ಹಾನಿಗೆ ಒಳಗಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿದ ಮಾಹಿತಿ ಆಧರಿಸಿ, ಪುನಃ ಮೂಲಸೌಕರ್ಯ ಕಲ್ಪಿಸಲು ಅಲ್ಲಿಯೇ ಆದೇಶ ಮಾಡಿದರು.

ಕೆಲ ದಿನಗಳ ಹಿಂದೆ ನಾನು ಕೆಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೆ, ಆ ಸಂದರ್ಭದಲ್ಲಿ ಈ ಹಾನಿಯನ್ನು ನಾನು ಸ್ವತಃ ವೀಕ್ಷಣೆ ಮಾಡಿದ್ದೇನೆ, ತ್ವರಿತ ಗತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಯಥಾಸ್ಥಿತಿಗೆ ತರಬೇಕಾಗಿದೆ. ಇದಕ್ಕಾಗಿ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

# ಜಲಸಿರಿ : ಡಿಸೆಂಬರ್ ಒಳಗೆ ಮುಗಿಸಿ



**(1ನೇ ಪುಟದಿಂದ)** ದುರಸ್ತಿ ಮಾಡಬೇಕು. ಪ್ರಸಕ್ತ ವರ್ಷದ ಅಂತ್ಯದ ವೇಳೆಗೆ ನಗರದ ಎಲ್ಲಾ ಬಡಾವಣೆಯ ನಿವಾಸಿಗಳಿಗೆ ಜಲಸಿರಿ ಯೋಜನೆಯಡಿ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದರು.

ಗುತ್ತಿಗೆದಾರರು ಮಾತನಾಡಿ, 83 ಕೋಟಿ ರೂ. ವೆಚ್ಚದ ಬೃಹತ್ ನೀರು ಪೂರೈಕೆ ಯೋಜನೆಯಲ್ಲಿ ಶೇ.95 ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಉಳಿದ ಶೇ.5 ರಷ್ಟು ಕಾಮಗಾರಿಯನ್ನು ಪ್ರಸ್ತುತ ವರ್ಷದ ನವೆಂಬರ್ ತಿಂಗಳೊಳಗೆ ಪೂರ್ಣಗೊಳಿಸಲಾಗುವುದು ಎಂದರು.

472 ಕೋಟಿ ರೂ. ವೆಚ್ಚದ 24x7 ನಿರಂತರ ನೀರು ಸರಬರಾಜು ಯೋಜನೆಯಡಿ ಕಾಮಗಾರಿ ಪೂರ್ಣಗೊಂಡಿದೆ. ಈ ಯೋಜನೆಯಡಿ 1340 ಕಿ.ಮೀ ಪೈಪ್ ಲೈನ್ ಹಾಕಬೇಕಾಗಿದೆ. ಅದರಲ್ಲಿ 1057 ಕಿಮೀ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, 283 ಕಿ.ಮೀ ಪೈಪ್ ಲೈನ್ ಕಾಮಗಾರಿ ಬಾಕಿ ಇದೆ.

19 ಓವರ್ ಹೆಡ್ ಟ್ಯಾಂಕ್ ಗಳಲ್ಲಿ 13 ಟ್ಯಾಂಕ್‌ಗಳು ಪೂರ್ಣಗೊಂಡಿದ್ದು, ಉಳಿದ ಟ್ಯಾಂಕ್‌ಗಳ ಕೆಲಸ ಪ್ರಗತಿಯಲ್ಲಿದೆ. ಒಟ್ಟಾರೆ 97,589 ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಬೇಕಾಗಿದೆ. ಅದರಲ್ಲಿ 47,328 ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಪ್ರಸ್ತುತ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಬಾಕಿ ಉಳಿದ ಎಲ್ಲಾ ಮನೆಗಳಿಗೂ ಸಂಪರ್ಕ ಕಲ್ಪಿಸಿ ನೀರು ಸರಬರಾಜು ಮಾಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರದ ಶಾಸಕ ಎಸ್.ಎ ರವೀಂದ್ರನಾಥ್, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಕೆ.ಯು.ಐ.ಡಿ. ಎಫ್.ಸಿ ವ್ಯವಸ್ಥಾಪಕ ನಿರ್ದೇಶಕರಾದ ದೀಪ, ಇಂಜಿನಿಯರ್ ಕ್ಯಾಪ್ಟನ್ ದೊಡ್ಡಿಹಾಳ್ ಹಾಗೂ ಮಂಜುನಾಥ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಸೇರಿದಂತೆ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

# ಏಕಲವ್ಯ ಪ್ರಶಸ್ತಿಗೆ ಅರ್ಜಿ

ದಾವಣಗೆರೆ ಜು.15 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. 2021 ನೇ ಸಾಲಿನ ಏಕಲವ್ಯ ಪ್ರಶಸ್ತಿಗಳಿಗಾಗಿ ಅರ್ಹ ಕ್ರೀಡಾಪಟುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಆಗಸ್ಟ್ 3 ರ ಒಳಗಾಗಿ ಕಛೇರಿಗೆ ಸಲ್ಲಿಸಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಝೂಂಡ ಹೂಡಬೇಡಿ

**(1ನೇ ಪುಟದಿಂದ)** ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಡಿ.ವಿ. ಸದಾನಂದಗೌಡ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಂಪುಟದ ಸದಸ್ಯರುಗಳು, ಆಯ್ದ ಶಾಸಕರು ಹಾಗೂ ಮುಖಂಡರು ಭಾಗವಹಿಸಿದ್ದರು.

# ತುಂಗಭದ್ರಾ : ಪ್ರವಾಹ



**(1ನೇ ಪುಟದಿಂದ)** ಪ್ರವಾಹ ಪರಿಸ್ಥಿತಿ ಪರಿಶೀಲಿಸಿ, ಗ್ರಾಮಸ್ಥರ ಜೊತೆ ಅಗತ್ಯ ಸೌಲಭ್ಯಗಳ ಕುರಿತು ಚರ್ಚಿಸಿದರು.

ಶುಕ್ರವಾರ ಸಂಜೆ ವರದಿ ಪ್ರಕಾರ ಭದ್ರಾ ಜಲಾಶಯಕ್ಕೆ 45,229 ಕ್ಯೂಸೆಕ್ಸ್ ಒಳಹರಿವು ಇದ್ದು, 65,087 ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡಲಾಗುತ್ತಿದೆ. ತುಂಗಾ ಜಲಾಶಯಕ್ಕೆ ಒಳ ಬರುತ್ತಿರುವ 55 ಸಾವಿರ ಕ್ಯೂಸೆಕ್ಸ್ ನೀರನ್ನೂ ನದಿಗೆ ಹರಿಸಲಾಗುತ್ತಿದೆ. ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ 1 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡಲಾಗಿದೆ. ಜಲಾಶಯ ನೀರಿನ ಮಟ್ಟ 183 ಅಡಿ ಆಗಿದೆ.

# ಕೋಕೋ ಬೆಳೆಯಿಂದ ಮಣ್ಣಿನ ಫಲವತ್ತತೆ, ಆದಾಯ ಹೆಚ್ಚಳ



## ಅಣಬೇರು ಗ್ರಾಮದಲ್ಲಿ ಅಂತರ ಬೆಳೆ ತರಬೇತಿ ಕಾರ್ಯಕ್ರಮದಲ್ಲಿ ವಿಜ್ಞಾನಿ ಎಂ.ಜಿ. ಬಸವನಗೌಡ

ದಾವಣಗೆರೆ,ಜು.15- ತೆಂಗಿನ ಬೆಳೆಯಲ್ಲಿ ಅಂತರ ಬೆಳೆಯಾಗಿ ಕೋಕೋ ಬೆಳೆಯನ್ನು ಬೆಳೆಯುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುವುದಲ್ಲದೆ, ಉಪ ಆದಾಯವನ್ನು ಗಳಿಸಲು ಅನುಕೂಲವಾಗುತ್ತದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಬಸವನಗೌಡ ಎಂ.ಜಿ. ತಿಳಿಸಿದರು.

ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಇವರ ಸಂಯುಕ್ತಾಶಯದಲ್ಲಿ ತಾಲ್ಲೂಕಿನ ಅಣಬೇರು ಗ್ರಾಮದಲ್ಲಿ, ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆಯಡಿ ಕೋಕೋ ಅಂತರ ಬೆಳೆ ಪ್ರದೇಶ ವಿಸ್ತರಣೆ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತೋಟಗಾರಿಕೆ ಇಲಾಖೆಯಲ್ಲಿ ಈ ವರ್ಷ ಮಾಯಕೊಂಡ ಹೋಬಳಿಯಲ್ಲಿ ಸುಮಾರು 50 ಎಕರೆ ಪ್ರದೇಶದಲ್ಲಿ ಬೆಳೆ ವಿಸ್ತರಣೆ ಯೋಜನೆಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಪ್ರತೀ ಹೆಕ್ಟೇರಿಗೆ ರೂ. 16690/ ಗಳ ಸಹಾಯ ಧನ ಲಭ್ಯವಿದೆ ಹಾಗೂ ಒಬ್ಬ ರೈತರಿಗೆ ಗರಿಷ್ಠ 4.0 ಹೆಕ್ಟೇರ್‌ವರೆಗೆ ಸಹಾಯಧನ ನೀಡಲು ಅವಕಾಶವಿದೆ ಎಂದು ತಿಳಿಸಿದರು.

ಇಂದು ತೆಂಗಿನ ತೋಟಗಳಲ್ಲೂ ಅಡಿಕೆ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತಿದ್ದು, ರೈತರು ಮುಂಜಾಗ್ರತವಾಗಿ ನೀರಿನ ಬಳಕೆ ಬಗ್ಗೆ ಜಾಗರೂಕರಾಗಬೇಕು. ಕೋಕೋ ಬೆಳೆಗೆ ಕಡಿಮೆ ನೀರಿನ ಅವಶ್ಯಕತೆಯಿದ್ದು ಮಣ್ಣಿನ ಭೌತಿಕ, ರಾಸಾಯನಿಕ ಗುಣಗಳ ವೃದ್ದಿಗೆ ಕೋಕೋ ಬೆಳೆಯ ಎಲೆಗಳು ಸಹಾಯ ಮಾಡುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ರಾದ ಶ್ರೀಮತಿ ರೇಷ್ಮಾಪರ್ವಿನ್ ಮಾತನಾಡಿ ದರು. ಅಧಿಕಾರಿಗಳಾದ ವಿಶ್ವೇಶ್ವರಯ್ಯ, ಏಕಾಂತ, ಅರುಣರಾಜ್, ವಸಂತ ಕುಮಾರ್, ರೈತರಾದ ಪಾಲಾಕ್ಷಪ್ಪ, ಮಲ್ಲಿಕಾರ್ಜುನಪ್ಪ ಮತ್ತು ಬಸವರಾಜಪ್ಪ ಇತರರು ಹಾಜರಿದ್ದರು.

# ಧುರೀಣರ ಸಂಕಷ್ಟ ನಿವಾರಣೆ ಸರ್ಕಾರದ ಹೊಣೆ

**(1ನೇ ಪುಟದಿಂದ)** ಸಿಗುತ್ತದೆ ಎಂದವರು ತಿಳಿಸಿದರು. ಸಾರಿಗೆ ನೌಕರರ ವಿಷಯ ಕಾನೂನು ಹೋರಾಟವಾಗಬಾರದು. ಮಾನವೀಯ ವಿಷಯದ ಮೇಲೆ ಕ್ರಮ ಆಗಬೇಕು. ನಿಮ್ಮ ಕಷ್ಟಗಳ ಬಗ್ಗೆ ಸರ್ಕಾರದ ಜೊತೆ ಮಾತನಾಡಲು ಮುಜುಗರ ಇಲ್ಲ. ಈ ಬಗ್ಗೆ ಸರ್ಕಾರದ ಅಧಿಕಾರಸ್ಥರ ಜೊತೆ ಖಾಸಗಿಯಾಗಿ ಮಾತನಾಡುತ್ತೇನೆ ಎಂದು ಶ್ರೀಗಳು ನೌಕರರಿಗೆ ಭರವಸೆ ನೀಡಿದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಸಾರಿಗೆ ನೌಕರರು ಮುಷ್ಕರ ಮಾಡಿದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಷ್ಕರಕ್ಕೆ ಮುಂದಾಗದೇ ಬೇಡಿಕೆ ಈಡೇರಿಸಿಕೊಳ್ಳಿ. ಇದಕ್ಕೆ ತಮ್ಮ ಬೆಂಬಲವೂ ಇದೆ ಎಂದರು.

ಹೈಕೋರ್ಟ್ ವಕೀಲ ಪಿ.ಹೆಚ್. ನೀರಲಕೇರಿ ಮಾತನಾಡಿ, ಸಾರಿಗೆ ಸಂಸ್ಥೆಯಲ್ಲಿ ಮಾನವ ಹಕ್ಕುಗಳ ಅತಿ ಹೆಚ್ಚಿನ ಉಲ್ಲಂಘನೆ ಆಗುತ್ತಿದೆ. ಸರ್ಕಾರ ಒಂಭತ್ತು ಭರವಸೆಗಳನ್ನು ಈಡೇರಿ ಸುವುದಾಗಿ ತಿಳಿಸಿ ಒಂದೂವರೆ ವರ್ಷವಾದರೂ ಕ್ರಮ ತೆಗೆದುಕೊಂಡಿಲ್ಲ. ಮುಷ್ಕರ ಮಾಡಿದ ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾದರೆ, ಭರವಸೆ ಈಡೇರಿಸದ ಸರ್ಕಾರಕ್ಕೆ ಯಾವ ಶಿಕ್ಷೆ ಕೊಡಬೇಕು? ಎಂದು ಪ್ರಶ್ನಿಸಿದರು.

ಇನ್ನೋರ್ವ ಹೈಕೋರ್ಟ್ ವಕೀಲ ಎಲ್. ಜಗದೀಶ್ ಮಾತನಾಡಿ, ಸಾರಿಗೆ ನೌಕರರು ಕಾನೂನು ಅರಿವು ಹೊಂದಬೇಕು. ಅಪಘಾತಗಳ ಸಂದರ್ಭದಲ್ಲಿ ನೌಕರರ ತಪ್ಪಿರದಿದ್ದರೂ ಎಫ್.ಐ.ಆರ್. ದಾಖಲಿಸುವ ಮೂಲಕ ನೌಕರರಿಗೆ ನಷ್ಟವಾಗುತ್ತಿದೆ ಎಂದು ಹೇಳಿದರು.

ಕೂಟದ ರಾಜ್ಯಾಧ್ಯಕ್ಷ ಆರ್.ಚಂದ್ರಶೇಖರ್ ಮಾತನಾಡಿ, ಸಾರಿಗೆ ನೌಕರರು ಸರ್ಕಾರದ ಉದ್ಯೋಗಿಗಳಿಗಿಂತ ಹೆಚ್ಚು ಕೆಲಸ ಮಾಡಿದರೂ ಶೇ.40ರಷ್ಟು ಕಡಿಮೆ ವೇತನ ಪಡೆಯುತ್ತಿದ್ದಾರೆ. ಮುಷ್ಕರದ ನಂತರ 2,500 ನೌಕರರು ವಜಾ ಹಾಗೂ 3,200 ನೌಕರರು ವರ್ಗಾವಣೆ ಆಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಸಾಮಾಜಿಕ ಹೋರಾಟಗಾರ ಚಂದ್ರಶೇಖರ್ ಹಿರೇಮಠ್, ನೌಕರರ ಕೂಟದ ಪ್ರಧಾನ ಕಾರ್ಯದರ್ಶಿ ಕೆ. ತಿಪ್ಪೇಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಎಲ್ಲಾ ನಿಗಮಗಳಲ್ಲಿ ಸಾರಿಗೆ ನಿಗಮದ ನೌಕರರಿಗೆ ಕಡಿಮೆ ವೇತನ

ಸಾರಿಗೆ ನೌಕರರ ವೇತನವನ್ನು ನಾಲ್ಕು ವರ್ಷಕ್ಕೊಮ್ಮೆ ಪರಿಷ್ಕರಿಸುವ 'ವ್ಯವಹಾರ'ವನ್ನು ಸರ್ಕಾರ ನಿಲ್ಲಿಸಬೇಕು. ಇತರೆ ನಿಗಮಗಳ ಉದ್ಯೋಗಿಗಳಿಗೆ ಸರ್ಕಾರಿ ನೌಕರರ ಮಾದರಿಯ ವೇತನ ನೀಡಲಾಗುತ್ತಿದೆ. ಅದೇ ರೀತಿ ಸಾರಿಗೆ ನೌಕರರಿಗೆ ವೇತನ ಹಾಗೂ ಸೌಲಭ್ಯ ಕಲ್ಪಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಚಂದ್ರಶೇಖರ್ ಹಿರೇಮಠ್ ಒತ್ತಾಯಿಸಿದ್ದಾರೆ.

ಸರ್ಕಾರದ ಎಲ್ಲಾ ನಿಗಮಗಳಲ್ಲಿ ಸಾರಿಗೆ ನಿಗಮದ ನೌಕರರಿಗೇ ಅತಿ ಕಡಿಮೆ ವೇತನ ಸಿಗುತ್ತಿದೆ. ಅದರಲ್ಲೂ ಕೆ.ಇ.ಬಿ. ಹಾಗೂ ಜಲ ನಿಗಮಗಳ ಉದ್ಯೋಗಿಗಳು ಸರ್ಕಾರಿ ನೌಕರರಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದಾರೆ ಎಂದವರು ತಿಳಿಸಿದರು.

# ಸವಿತಾ ಕ್ಷೇಮಾಭಿವೃದ್ಧಿ ಸಂಘದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.15- ಸವಿತಾ ಕ್ಷೇಮಾಭಿವೃದ್ಧಿ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಸಮಾಜದ ವಿದ್ಯಾರ್ಥಿಗಳು ಜುಲೈ 30 ರೊಳಗಾಗಿ ಅರ್ಜಿಯೊಂದಿಗೆ ಅಂಕಪಟ್ಟಿಯ ನಕಲು ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ನಗರದ ಮಹಿಳಾ ಸಮಾಜ ರಸ್ತೆಯಲ್ಲಿರುವ ಹರ್ಷ ಕಾಂಪ್ಲೆಕ್ಸ್‌ನಲ್ಲಿರುವ ಸಂಘದ ಕಚೇರಿಗೆ ತಲುಪಿಸುವಂತೆ ಸಂಘದ ವೆಂಕಟಾಚಲಪತಿ ಮತ್ತು ಪಿ.ಜಿ. ನಾಗರಾಜ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಮೊ: 9964031098, 9342756930 ಗೆ ಸಂಪರ್ಕಿಸಬಹುದು.


## ಸಾರ್ವಜನಿಕ ಪ್ರಕಟಣೆ


ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ **ಆಯೇಶಾ ಬಾನು, ಅಯಾನ್**, ಇವರು (ವಾದಿಗಳು), **ಆಶಾಬೀ, ಅಮೀನಾ, ರಿಹಾನ್ ಹಾಗೂ ಇತರರು** ಇವರುಗಳು (ಪ್ರತಿವಾದಿಗಳು), ಇವರ ವಿರುದ್ಧ ದಾವಣಗೆರೆ ನಗರದ, ಮನೆ ನಂ. 39, 5ನೇ ವಾರ್ಡ್, 7ನೇ ಡಿವಿಜನ್, ನಿಟ್ಟುವಳ್ಳಿ ರಸ್ತೆ, ಭಗತ್‌ಸಿಂಗ್ ನಗರ, 6ನೇ ಕ್ರಾಸ್, ಡಾಂಗೇ ಪಾರ್ಕ್ ಎದುರು, 20x40 ರಲ್ಲಿರುವ ಮನೆ, ಇಲ್ಲಿ ಸೇರಿದ ಆಸ್ತಿ ಮೇಲೆ ಅಸಲು ದಾವೆ ಸಂಖ್ಯೆ : 299/2022 ನ್ನು ಪಾಲು ವಿಭಾಗಕ್ಕಾಗಿ ಮತ್ತು ಇನ್ನಿತರೆ ಪರಿಹಾರಗಳನ್ನು ಕೋರಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ ಕೋರ್ಟ್, ದಾವಣಗೆರೆ ಇಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೆ ಘನ ನ್ಯಾಯಾಲಯವು ಎದುರುದಾರರ ಅಂದರೆ ಪ್ರತಿವಾದಿಗಳ ವಿರುದ್ಧ ಸದರಿ ಮೇಲಿನ ಅನುಸೂಚಿಯ ಸ್ವತ್ತುಗಳನ್ನು ಯಾರಿಗೂ, ಯಾವುದೇ ರೀತಿಯಿಂದ ಮಾರಾಟ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಎದುರುದಾರರು ಅಂದರೆ ಪ್ರತಿವಾದಿಯರು ಮಾರಲು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಮೇಲಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರೂ ಮಾರಾಟ ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು.

**ಕಕ್ಷಿದಾರರ ಸಹಿ (ವಾದಿ)**
**(ಆಯೇಶಾ ಬಾನು)**

**ಸಹಿ**
**ಅಜಯ್. ಸಿ (ಎ.ಸಿ) ವಕೀಲರು,**
**ದಾವಣಗೆರೆ. ಮೊ: 97430 19896**


# ಜೀವನದಲ್ಲಿ ಐಎಎಸ್ ಒಂದೇ ಯಶಸ್ಸು ಅಲ್ಲ : ಎಂ.ಎಸ್.ದಿವಾಕರ್

## ನಗರದಲ್ಲಿ ಬಿ.ಎಂ.ವಾಗೀಶ್ ಸ್ವಾಮಿ ಅಭಿಮಾನಿ ಬಳಗದಿಂದ ಅಭಿನಂದನಾ ಸಮಾರಂಭ



ದಾವಣಗೆರೆ, ಜು.15- ಐಎಎಸ್ ಒಂದೇ ಯಶಸ್ಸು ಅಲ್ಲ. ಪ್ರತಿಯೊಬ್ಬರೂ ಅವರವರ ಬದುಕಿನಲ್ಲಿ ಸಾಧನೆ ಮೂಲಕ ಯಶಸ್ಸು ಕಂಡುಕೊಂಡಿದ್ದಾರೆ. ರಾತ್ರಿ ಮಲಗಿದ ತಕ್ಷಣ ತೃಪ್ತಿಯಾಗುವಷ್ಟು ನಿದ್ದೆ ಮಾಡುವುದೇ ಯಶಸ್ಸು ಎಂದು ಐಎಎಸ್ ಪದವಿ ಪುರಸ್ಕೃತ ಗಂಗನಕಟ್ಟೆಯ ಎಂ.ಎಸ್.ದಿವಾಕರ್ ಅಭಿಪ್ರಾಯಪಟ್ಟರು.

ಅವರು ಭಾನುವಾರ ಸಂಜೆ ನಗರದ ಸದ್ಯೋಜಾತ ಮಠದ ಸಭಾಭವನದಲ್ಲಿ ಬಿ.ಎಂ.ವಾಗೀಶ್ ಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಯಶಸ್ಸು ಎಲ್ಲರಿಗೂ ಸುಲಭವಾಗಿ ಸಿಗುವುದಿಲ್ಲ. ಆಸಕ್ತಿಯ ಜೊತೆಗೆ ಕಷ್ಟಪಡುವ ವ್ಯಕ್ತಿಗೆ ಯಶಸ್ಸು ಖಂಡಿತಾ ಸಿಗುತ್ತದೆ ಎಂಬುದಕ್ಕೆ ನಮ್ಮ ಜೊತೆ ವೇದಿಕೆಯಲ್ಲಿರುವ ಅನೇಕರು ಉದಾಹರಣೆ ಆಗಿದ್ದಾರೆ. ಯೋಗ ಮತ್ತು ಯೋಗ್ಯತೆ ಕೂಡಾ ಎಲ್ಲರಿಗೂ ಲಭಿಸುವುದಿಲ್ಲ. ಅಪಮಾನ, ಅವಮಾನ, ಕಷ್ಟಗಳನ್ನು ಸಹಿಸಿಕೊಂಡು ನಿಲ್ಲುವವನಿಗೆ ಯೋಗ, ಯೋಗ್ಯತೆ ಸಿಗುತ್ತದೆ.

ಯಶಸ್ಸು ಪಡೆಯುವವರೆಗೂ ಕಿವಿಕೇಳದ ಕಿವುಡುನಾಗಿರಬೇಕು. ಯಶಸ್ಸು ಸಿಕ್ಕ ನಂತರ ಮೂಕನಂತಿರಬೇಕೆಂದು ಹೇಳಿದ ದಿವಾಕರ್ ಅವರು, ನಾನು ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ ಡಿಸಿ ಹುದ್ದೆ ನನಗೆ ಕಷ್ಟ ಆಗುವುದಿಲ್ಲ ಎಂಬ ವಿಶ್ವಾಸ ನನಗಿದೆ. ಊರಿಗೆ ಹಾಗೂ ಜಿಲ್ಲೆಗೆ ಉತ್ತಮ ಸೇವೆ ಸಲ್ಲಿಸುತ್ತೇನೆಂದರು.

ಇನ್ನೋರ್ವ ಸನ್ಮಾನಿತರಾದ ಐಎಫ್‌ಎಸ್ ಪದವಿ ಪುರಸ್ಕೃತ ಜಿ.ಆರ್.ಅಜ್ಜಯ್ಯ ಮಾತನಾಡಿ, ದಿವಾಕರ್ ಅವರು ನನಗೆ ಪಿಯುಸಿ ನಂತರ ಮಾರ್ಗದರ್ಶಕರಾಗಿದ್ದರು. ನಾನು ಐಎಫ್‌ಎಸ್ ಮಾಡಲು ಅವರ ಸಹಕಾರ ಬಹಳ ಇದೆ. ಸಿಕ್ಕಿರುವ ಅವಕಾಶವನ್ನು ಉತ್ತಮ ಸೇವೆಗಾಗಿ ಬಳಸುತ್ತೇನೆಂದರು.

ಸಮಾರಂಭ ಉದ್ಘಾಟಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ನಾವು ಸರ್ವೆಂಟ್ ಆಗಿ ಕೆಲಸ ಮಾಡಿದಾಗ ಮಾತ್ರ ಜನರ ಹೃದಯದಲ್ಲಿ ಸ್ಥಾನ ಪಡೆಯಲು ಸಾಧ್ಯ. ಈ ನಿಟ್ಟಿನಲ್ಲಿ ಜನರ ಮಧ್ಯೆ ಇದ್ದು ಸೇವೆ ಸಲ್ಲಿಸಲು ಅಧಿಕಾರಿಗಳು ಶ್ರಮಿಸಬೇಕೆಂದು ಕಿವಿಮಾತು ಹೇಳಿದರು.

ದಿವಾಕರ್ ಹಾಗೂ ಅಜ್ಜಯ್ಯ ಅವರು ಜ್ಞಾನವನ್ನು ಸಂಪಾದನೆ ಮಾಡಿ ಜ್ಞಾನ ಬಲದಿಂದ ಐಎಎಸ್, ಐಎಫ್‌ಎಸ್ ಪಾಸ್ ಮಾಡಿದ್ದಾರೆ. ಜ್ಞಾನದಿಂದ ಎಲ್ಲವೂ ಸಿಗುತ್ತದೆ ಎಂಬುದನ್ನು ನಾವು ಇಲ್ಲಿ ಇಂತಹ ಸಾಧಕರನ್ನು ನೋಡಿ ತಿಳಿದುಕೊಳ್ಳಬಹುದೆಂದರು.

ಪ್ರಗತಿಪರ ಚಿಂತಕ ತೇಜಸ್ವಿ ಪಟೇಲ್ ಮಾತನಾಡಿ, ಜ್ಞಾನದ ಬಲದಿಂದ ಅಧಿಕಾರಿಗಳಾದರೆ ಜನರಿಗೆ ಒಳ್ಳೆಯದಾಗುತ್ತದೆ. ಬೇರೆ ಯಾವ್ಯಾವೋ ಬಲದಿಂದ ಅಧಿಕಾರಿ ಆದರೆ ಅವರಿಂದ ನಾವು ಏನನ್ನೂ ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎಂದರು.

ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ, ಜನಪ್ರತಿನಿಧಿಗಳಿಗೆ ಕೆಲಸನೇ ಇರಲ್ಲ ಎಂದ ಪಟೇಲ್, ಸಂವಿಧಾನ ಪ್ರಜಾಪ್ರಭುತ್ವ ಮಾತನಾಡುವಂತಿರಬೇಕೇ ಹೊರತು ಜಾತಿ, ಪಕ್ಷ, ಅಧಿಕಾರ ಅಲ್ಲ ಎಂದರು.

ಮಾಜಿ ಮಹಾಪೌರರಾದ ಎಸ್.ಟಿ. ವೀರೇಶ್, ಬಿ.ಜಿ.ಅಜಯ್‌ಕುಮಾರ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ವರ್ತಕ ಉಳುವಯ್ಯ, ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕಿನ ಅಧ್ಯಕ್ಷ ಎನ್‌ಎಂಜೆಬಿ ಮುರುಗೇಶ್ ಆರಾಧ್ಯ, ಹರಿಹರ ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್ ಮಾತನಾಡಿದರು.

ಜಂಗಮ ಸಮಾಜದ ಮುಖಂಡ ಸಾಲಕಟ್ಟೆ ಹಾಲಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಬಿ.ಪಿ.ಹರೀಶ್, ರೈಸ್ ಮಿಲ್ ಮಾಲೀಕ ಬಿ.ಎಂ.ನಂಜಯ್ಯ, ಜಿ.ಪಂ.ಮಾಜಿ ಅಧ್ಯಕ್ಷರಾದ ಉಮಾ ರಮೇಶ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಜಯಮ್ಮ, ಬಾಮ ಬಸವರಾಜಯ್ಯ, ಶ್ರೀಮತಿ ರೂಪಾ ದಿವಾಕರ್, ಶ್ರೀಮತಿ ನಂದಿನಿ ಅಜ್ಜಯ್ಯ, ನಂದಿಗಾವಿ ತಿಪ್ಪೇಸ್ವಾಮಿ, ಬಿ.ಎಂ. ಚನ್ನೇಶ್ ಸ್ವಾಮಿ, ಬಿ.ಎಂ. ಜಗನ್ನಾಥ ಸ್ವಾಮಿ, ಪೆಟ್ರೋಲ್ ಬಂಕ್ ಪ್ರಕಾಶ್, ರೇಣುಕಾರಾಧ್ಯ, ಪತ್ರಕರ್ತ ಜಿಗಳಿ ಪ್ರಕಾಶ್, ಪುರಸಭೆ ಸದಸ್ಯರಾದ ಬಿ. ಮಂಜುನಾಥ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಆಶ್ರಯ ಸಮಿತಿ ಸದಸ್ಯ ಬಿ. ಚಂದ್ರಪ್ಪ, ಜಿ.ಪಿ. ಹನುಮನಗೌಡ, ಪಾಳೇಗಾರ ನಾಗರಾಜ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಸಂಘಟಕ ಹಾಗೂ ಜಿ.ಪಂ.ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುತ್ತಿಗೆದಾರ ಬಿ.ಎಂ.ಜಗದೀಶ್ವರ ಸ್ವಾಮಿ ಸ್ವಾಗತಿಸಿದರು. ಶಿಕ್ಷಕ ಗುರುಸಿದ್ದಸ್ವಾಮಿ ವಂದಿಸಿದರು.


## In the Court of the 2nd Additional Senior Civil Judge Davanagere

**O.S. 187/2019**

Plaintiff : Ms. Manjulamma, D/o. Late Doddabasappa, Aged about 38 years, Behind E.S.I. Hospital, # 115/p, Nittuvalli, Davanagere. V/s

Defendants : Sri Kallesh and Others

Defendant No. 11. Smt. Meena, V. Matad w/o V.H. Matad, aged about 34 years, R/o. Belalgere Village, Channagiri Taluk.

**Summons Under Order 5 Rule 20 of C.P.C.**

Take Notice that the plaintiff has filed the above case against you the defendant No.11 and others seeking partition and separate possession of her legitimate share in the plaint schedule properties. Wherein you arrayed as defendant No.11 and now the case is posted for the appearance of you the defendant No. 11. Therefore you the defendant No. 11 is hereby called upon to appear before the Hon'ble Court on 02.08.2022. at 11. am either personally or through your advocate. otherwise the matter will be heard and decided in your absence.

Give under my hand seal of this court on 11th day July of 2022

**A.S. Basavaraj**
Advocate for plaintiff,
Davanagere.

**By Order of Court**
**Sd/-**
Chief Ministerial Officer Hon'ble 2nd Additional Senior Civil Judge, Davangere.

# ಬಹುಮುಖ ಸೇವೆಯ ಸಂಭಾವಿತ ವ್ಯಕ್ತಿ ಲಿಂ. ಹರಳೆಣ್ಣೆ ಕೊಟ್ರೂರು ಬಸವಪ್ಪನವರು

## ಇವರ ಹೆಸರಿನ ಟ್ರಸ್ಟ್ ಮುಖೇನ ಇಂದು ಪ್ರತಿಭಾ ಪುರಸ್ಕಾರ, ತನ್ನಿಮಿತ್ತ ಶ್ರೀಯುತರ ಸಮಾಜಮುಖಿ ಸೇವಾ ಕಾರ್ಯಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಇಂದಿನ ಆಧುನಿಕ ಸಾಧನ ಸವಲತ್ತುಗಳ ಸಂದರ್ಭದಲ್ಲಿಯೂ ಬದುಕು ರೂಪಿಸಿಕೊಳ್ಳುವುದು ಕಷ್ಟ ಎಂದು ಹೇಳುವವರೂ ಇದ್ದಾರೆ. ಆದರೆ, ಇಂತಹ ಯಾವುದೇ ಸಾಧನ, ಸವಲತ್ತುಗಳಿಲ್ಲದ ಕಾಲದಲ್ಲೂ ತಮ್ಮ ಬದುಕು ಕಟ್ಟಿಕೊಂಡದ್ದಷ್ಟೇ ಅಲ್ಲ, ಇತರರ ಬದುಕಿಗೆ ಪೂರಕವಾದ ಸಂಸ್ಥೆಗಳನ್ನು ಹುಟ್ಟುಹಾಕಿದ ಹಾಗೂ ಸಂಸ್ಥೆಗಳಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದ ವ್ಯಕ್ತಿಗಳು ಅನುಕರಣೀಯರೂ, ಆದರ್ಶರೂ ಆಗಿರುತ್ತಾರೆ. ನಗರದ ಇಂತಹ ವ್ಯಕ್ತಿಗಳಲ್ಲಿ ಹರಳೆಣ್ಣೆ ಕೊಟ್ರೂರು ಬಸಪ್ಪನವರೂ ಒಬ್ಬರು. 'ರಾಮ್ ಅಂಡ್ ಕೋ ಸರ್ಕಲ್' ಈಗ ತುಂಬಾ ಜನಜನಿತ ಪ್ರದೇಶಗಳಲ್ಲಿ ಒಂದು. ಆದರೆ, ಇದು 'ಹರಳೆಣ್ಣೆ ಕೊಟ್ರೂರು ಬಸವಪ್ಪ ವೃತ್ತ'ವೆಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಕೊಟ್ರೂರು ಬಸಪ್ಪನವರು ಚೌಕೀಪೇಟೆಯ ಸಾಮಾನ್ಯ ವ್ಯಾಪಾರಸ್ಥರ ಮಗನಾಗಿದ್ದರೂ ಪರಿಶ್ರಮದಿಂದ ಪುಣೆಯಲ್ಲಿ ಕಾನೂನು ಪದವಿ ಪಡೆದು, ದಾವಣಗೆರೆಗೆ ಬಂದು ವಕೀಲಿ ವೃತ್ತಿ ಆರಂಭಿಸಿದವರು. ವೃತ್ತಿ ಜೀವನಕ್ಕಷ್ಟೇ ಸೀಮಿತವಾಗದೇ ಸಮಾಜದ ಅಭಿವೃದ್ಧಿಯ ಚಿಂತನೆ ಮಾಡಿ, ಅನೇಕ ಸಂಘ-ಸಂಸ್ಥೆಗಳ ಹುಟ್ಟಿಗೂ, ಬೆಳವಣಿಗೆಗೂ ಕಾರಣರಾದವರು.

**ಅಧ್ಯಾತ್ಮಿಕ ಧಾರ್ಮಿಕ ಕ್ಷೇತ್ರದಲ್ಲಿ:** ದಾವಣಗೆರೆಯ ವೀರಶೈವ ವಿದ್ಯಾವರ್ಧಕ ಫಂಡ್ ಸಂಘದ ಅಧ್ಯಕ್ಷರಾಗಿ ಶ್ರೀ ಜಯದೇವ ಜಗದ್ಗುರುಗಳವರಿಂದ ನೇಮಿಸಲ್ಪಟ್ಟು ಶ್ರೀ ಜಯದೇವ ಪ್ರಸಾದ ನಿಲಯವು ಸುಸಜ್ಜಿತ ಕೊಠಡಿಗಳನ್ನು ಹೊಂದುವಲ್ಲಿ, ಶಿವಯೋಗ ಮಂದಿರದ ಆವರಣದಲ್ಲಿ ಲಿಂಗೈಕ್ಯ ಶ್ರೀ ಅಥಣಿ ಶಿವಯೋಗಿಗಳ, ಲಿಂಗೈಕ್ಯ ಶ್ರೀ ಜಯದೇವ ಜಗದ್ಗುರುಗಳ ಐಕ್ಯ ಮಂಟಪಗಳು ಸಾಕಾರವಾಗುವಲ್ಲಿ, ದೊಡ್ಡಪೇಟೆಯ ಶ್ರೀ ಪಾತಾಳಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದಲ್ಲಿ, ಚೌಕೀಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಗಳವರ ದೇವಸ್ಥಾನದ ಅಭಿವೃದ್ಧಿಯಲ್ಲಿ, ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರಾಗಿ ಬಸವ ಜಯಂತಿಯ ಆಚರಣೆಯಲ್ಲಿ, ವೀರಶೈವ ಸಾಹಿತ್ಯ ಸೇವಾ ಮಂಡಳಿಯ ಅಧ್ಯಕ್ಷರಾಗಿ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ಗ್ರಂಥಾಲಯ ಮತ್ತು ವಾಚನಾಲಯದ ಸ್ಥಾಪನೆಯಲ್ಲಿ ಇವರ ಪಾತ್ರ ಮಹತ್ತರವಾಗಿರುವುದು ಅಧ್ಯಾತ್ಮಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಇವರ ಸೇವೆಗೆ ಸಾಕ್ಷಿಯಾಗಿವೆ.



**ಕೈಗಾರಿಕೋದ್ಯಮ ರಂಗದಲ್ಲಿ:** 'ಮೈಸೂರು ರಾಜ್ಯದ ಮ್ಯಾಂಚೆಸ್ಟರ್' ಎಂದೇ ಕರೆಸಿಕೊಂಡ ದಾವಣಗೆರೆಯ ಹತ್ತಿ ಜವಳಿ ಕೈಗಾರಿಕೋದ್ಯಮ ರಂಗದಲ್ಲಿ ಶ್ರೀ ಗಣೇಶ ಟೆಕ್ಸ್‌ಟೈಲ್ ಹಾಗೂ ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಮಿಲ್ಸ್ ಸಲಹೆಗಾರರಾಗಿ, ಮಿಲ್ಲಿನ ಕಾರ್ಮಿಕ ಸಂಘದ ಅಧ್ಯಕ್ಷರಾಗಿ, ಜಗದೀಶ್ ಹೊಸೈರೀಸ್ ಮಿಲ್ಸ್ ಲಿ. ಎಂಬ ಮಿಲ್‌ನ್ನು ಸ್ವತಃ ಸ್ಥಾಪಿಸುವ ಮೂಲಕ ಕೈಗಾರಿಕಾ ರಂಗದ ಅಭಿವೃದ್ಧಿಗೆ ಶ್ರಮಿಸಿದರು.

**ವ್ಯಾಪಾರೋದ್ಯಮದಲ್ಲಿ :** ಆಗಿನ 'ಟ್ರೇಡ್ ಅಸೋಸಿಯೇಷನ್' ಈಗಿನ (ಛೇಂಬರ್ ಆಫ್ ಕಾಮರ್ಸ್) ನ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸುವಾಗ ವ್ಯಾಪಾರೋದ್ಯಮದ ಹಿತ ಕಾಯುವಲ್ಲಿ ಶ್ರಮಿಸಿದರು.

**ಸಹಕಾರ ರಂಗದಲ್ಲಿ:** ಚೌಕಿಪೇಟೆಯ ದಾವಣಗೆರೆ ಸಿಟಿ ಕಂಸ್ಯೂಮರ್ಸ್ ಸೊಸೈಟಿಯ ಅಧ್ಯಕ್ಷರಾಗಿ ನಿಯಂತ್ರಿತ ಆಹಾರ ಪದಾರ್ಥಗಳ ಪ್ರಾಮಾಣಿಕ ವಿತರಣೆಯಲ್ಲಿ ಅವರ ಗಮನ, ದಾವಣಗೆರೆ - ಹರಿಹರ ಕೋ ಆಪರೇಟಿವ್ ಹೋಲ್ ಸೇಲ್ ಸ್ಟೋರ್ಸ್ ಅಧ್ಯಕ್ಷರಾಗಿ ಇವರ ದಕ್ಷತೆಯ ಸೇವೆ, ಇವರ ಅಧ್ಯಕ್ಷತೆಯಲ್ಲಿ ಜನತಾ ಬಜಾರ್ ಆರಂಭ, ಜನತಾ ಬಜಾರಿನಲ್ಲಿ ಜನಪ್ರಿಯ ಬೇಕರಿ ವಿಭಾಗದ ಸ್ಥಾಪನೆ, 'ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ' ಸ್ಥಾಪನೆಗಾಗಿ ಗುಂಡಿ ಮಹದೇವಪ್ಪನವರೊಂದಿಗೆ ಷೇರು ಸಂಗ್ರಹಣೆಯಲ್ಲಿ ಇವರು ಮಾಡಿದ ಕಾರ್ಯ ಮುಂತಾದವು ಸಹಕಾರ ಕ್ಷೇತ್ರದಲ್ಲಿ ಅಮೂಲ್ಯ ಸೇವೆ.

**ಕೃಷಿ ರಂಗದಲ್ಲಿ :** ಹರಳೆಣ್ಣೆ ಕೊಟ್ರೂರು ಬಸವಪ್ಪನವರಿಗೆ ಅಂತರ್ಜಲ ಪತ್ತೆ ಸಾಮರ್ಥ್ಯವು ದೈವದತ್ತವಾಗಿ ಬಂದಿತ್ತು. ದಾವಣಗೆರೆ ಸುತ್ತಮುತ್ತಲಿನ ರೈತಾಪಿ ವರ್ಗದವರಿಗೆ (ಆಗಿನ್ನೂ ಭದ್ರಾ ನಾಲೆ ಬಂದಿರಲಿಲ್ಲ) ಅಂತರ್ಜಲ ಶೋಧನೆ ಮಾಡಿಕೊಡುವ ಮೂಲಕ ಕೃಷಿ ನೀರಿನ ಕೊರತೆ ನೀಗುವಲ್ಲಿಯೂ ಇವರು ಕಾರಣರಾಗಿದ್ದರು.

**ಪೌರಾಭಿವೃದ್ಧಿಯಲ್ಲಿ:** ಸ್ವಾತಂತ್ರ್ಯ ಪೂರ್ವದ ಕಾಲ, ದಾವಣಗೆರೆ ಪಟ್ಟಣದ ಜನಸಂಖ್ಯೆಯು ಸುಮಾರು ಹತ್ತು ಸಾವಿರದಷ್ಟು, ಇಲ್ಲಿನ ಪಟ್ಟಣ ಪಂಚಾಯಿತಿ ಅಥವಾ ಪುರಸಭೆಗೆ ತಹಶೀಲ್ದಾರರೇ ಅಧ್ಯಕ್ಷರು. ಮೈಸೂರು ಮಹಾರಾಜರ ಸರ್ಕಾರದಿಂದ ಉಪಾಧ್ಯಕ್ಷರ ನೇಮಕ ಆಗುತ್ತಿತ್ತು. 1934-35ನೇ ಇಸ್ವಿಯಲ್ಲಿ ಕೊಟ್ರೂರು ಬಸಪ್ಪನವರು ಹಾಗೆ ನೇಮಕಗೊಂಡ ಉಪಾಧ್ಯಕ್ಷರಾಗಿದ್ದರು. 1939ರ ವೇಳೆಗೆ ಜನರಿಂದಲೇ ಆಯ್ಕೆಗೊಂಡ ಅಧ್ಯಕ್ಷ-ಉಪಾಧ್ಯಕ್ಷ ರಾಗುವ ಸಂದರ್ಭದಲ್ಲಿ ಹರಳೆಣ್ಣೆಯವರೇ ದಾವಣಗೆರೆ ಪುರಸಭೆಯ ಪ್ರಥಮ ಉಪಾಧ್ಯಕ್ಷರೂ ಆದರು. ನಂತರ 1942 ರಿಂದ 1944 ಹಾಗೂ 1945 ರಿಂದ 1947 ರವರೆಗೆ ನಗರಸಭೆಯ ಅಧ್ಯಕ್ಷರೂ ಆಗಿ 09-08-1944 ರಂದು ಈಗಿನ ಮಹಾನಗರ ಪಾಲಿಕೆ ಕಟ್ಟಡದ ಶಂಕುಸ್ಥಾಪನೆ ಮಾಡಿಸಿದರು. 1904 ರಲ್ಲಿ ಜನಿಸಿ, 1974 ರಲ್ಲಿ ಲಿಂಗೈಕ್ಯರಾದ ಕೊಟ್ರೂರು ಬಸಪ್ಪನವರು ಮೃದುಭಾಷಿ, ಮಿತಭಾಷಿ, ಹಸನ್ಮುಖಿ, ಸಮಾಧಾನ ಶೀಲರು, ಸಾಂಪ್ರದಾಯಿಕವಾದ ಬಿಳಿ ಕಚ್ಚೆ ಪಂಚೆ, ಕೋಟು, ಟೋಪಿಯಲ್ಲಿ ಆಕರ್ಷಕರಾಗಿದ್ದರು. ನನ್ನ ಬಾಲ್ಯದಲ್ಲಿ ಚೌಕಿಪೇಟೆಯಲ್ಲಿ ನಮ್ಮ ಮನೆಯ ಎದುರಿನ ಸಾಲಿನಲ್ಲೇ ಇವರ ಮನೆಯೂ ಇತ್ತು. ನಮ್ಮ ತಂದೆ ಸುಪ್ರಸಿದ್ಧ ಚಿತ್ರಕಲಾವಿದ ಭುಜಂಗ ಶಾಸ್ತ್ರೀಯವರಿಗೆ ಹರಳೆಣ್ಣೆ ಕೊಟ್ರೂರು ಬಸಪ್ಪನವರು ಆತ್ಮೀಯರಾಗಿದ್ದರು. ಕೊಟ್ರೂರು ಬಸಪ್ಪನವರೊಂದಿಗೆ ಆಗಾಗ ನಾನು ಮಾತುಗಳನ್ನಾಡಿದ ಹಾಗೂ ಅವರ ಚಟುವಟಿಕೆಗಳನ್ನು ನೋಡಿದ ನೆನಪುಗಳು ಈಗಲೂ ಹಸಿರಾಗಿವೆ.

**- ಎಚ್.ಬಿ. ಮಂಜುನಾಥ,** ಹಿರಿಯ ಪತ್ರಕರ್ತರು.

## ಪದ್ಮಶಾಲಿ ಶ್ರೀ ಪ್ರಭುಲಿಂಗ ಸ್ವಾಮೀಜಿಗೆ ಕಿರೀಟ ಧಾರಣೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು.15 - ತಾಲ್ಲೂಕಿನ ತುಮ್ಮಿನ ಕಟ್ಟಿಯಲ್ಲಿ ಪದ್ಮಶಾಲಿಯ ಶ್ರೀ ಗುರು ಮಾರ್ಕಂಡೇಶ್ವರ ಗುರು ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಪ್ರಭುಲಿಂಗ ಸ್ವಾಮೀಜಿ ಅವರಿಗೆ ಗುರು ಪೂರ್ಣಿಮೆ ಅಂಗವಾಗಿ ಕಿರೀಟ ಧಾರಣೆ, ಪಾದಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ವೇದಿಕೆಯಲ್ಲಿ ಗೌರವ ಅತಿಥಿಗಳಾದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಶ್ರೀ ಪ್ರಿಯಾನಂದ ಸ್ವಾಮೀಜಿ, ಶ್ರೀ ಸದಾಶಿವ ಸ್ವಾಮೀಜಿ ನಾಗನೂರು ಮಠ, ಶ್ರೀ ಸದಾಶಿವ ಸ್ವಾಮೀಜಿ ತುಮ್ಮಿನಕಟ್ಟಿ, ಮಂಜುನಾಥ ಸ್ವಾಮೀಜಿ ಕಿತ್ತಳೆ ಅವರುಗಳ ಸಮ್ಮುಖದಲ್ಲಿ ಶ್ರೀ ಪ್ರಭುಲಿಂಗ ಸ್ವಾಮೀಜಿಯವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು .

ಡಾ|| ಬಸವರಾಜ ಕೇಲಗಾರ , ಚಂದ್ರಣ್ಣ ಮಂಚಿ, ಹನುಮಂತಪ್ಪ ಟಿ ಮುಕ್ತೇನಹಳ್ಳಿ , ಸಿದ್ದಪ್ಪ ಬಸಲಿ, ನೀಲಪ್ಪ ಕುಮಾರಪ್ಪನವರ, ಗೋಪಾಲ ಪೆದ್ದಿಪತಿ,ಬಸಣ್ಣ ಕೇಲಗಾರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಾಣೇಬೆನ್ನೂರಿನ ಬಸವರಾಜ್ ಐರಣಿ, ನಾಗರಾಜ್ ತುಮಕೂರು, ಪ್ರಕಾಶ ಅಗಡಿ, ಜಗದೀಶ್ ಅಗಡಿ , ಚಳ್ಳಕೆರೆಯ ವರ್ತಕ ಕೆ. ರವಿ, ಚಿತ್ರದುರ್ಗದ ಚಂದ್ರಶೇಖರ್ ಜಿಲ್ಲಾ ಅಧ್ಯಕ್ಷರು ತುಮ್ಮಿನಕಟ್ಟಿ ಮಾರುತಿ ಬೆನಕನಕೊಂಡ, ಹುಚ್ಚಪ್ಪ, ಗೋವಿಂದಪ್ಪ, ಗುರು ಮಹಾದೇವ್, ವಾಸನ ರುದ್ರಪ್ಪ ತಿಮ್ಮಾನವರು ಮತ್ತಿತರರು ಭಾಗವಹಿಸಿದ್ದರು.

## ಜಿಲ್ಲೆಯಲ್ಲಿ ಯಂತ್ರಚಾಲಿತ ದ್ವಿಚಕ್ರ ವಾಹನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ ಜು.15 - ದಾವಣಗೆರೆ ಜಿಲ್ಲೆಯ ಇಲಾಖೆಯ ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ (ರೆಟ್ರೋಫಿಟ್‌ಮೆಂಟ್ ಸಹಿತ) ಯೋಜನೆಗೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ದೈಹಿಕ ವಿಕಲಚೇತನರು ಆಗಸ್ಟ್ 20 ರ ಒಳಗಾಗಿ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ (MRW)) ಕಛೇರಿಗೆ ಭೇಟಿ ನೀಡಿ ಅರ್ಜಿ ಪಡೆದು ಮೇಲ್ಕಂಡ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ : ಹೊನ್ನಾಳಿ, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಶೈಲಜಾ ಕೆ.ಎಂ. ಮೊ.ಸಂ: 9886366809, ಚನ್ನಗಿರಿ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಕೆ.ಸುಬ್ರಮಣ್ಯಂ ಮೊ.ಸಂ: 9945738141 ಜಗಳೂರು ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಎಂ.ಕೆ.ಶಿವನಗೌಡ ಮೊ.ಸಂ: 9902105734 ಹರಿಹರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಶಶಿಕಲಾ ಟಿ. ಮೊ.ಸಂ: 9945458058 ದಾವಣಗೆರೆ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಚನ್ನಪ್ಪ. ಬಿ ಮೊ.ಸಂ: 9590829024 ಇವರನ್ನು ಸಂಪರ್ಕಿಸಬೇಕೆಂದು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಕೆ.ಕೆ.ಪ್ರಕಾಶ್ ತಿಳಿಸಿದ್ದಾರೆ.

## ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ ಜು.15 - 2022-23ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಯೋಜನೆಯಡಿ ಕರ್ನಾಟಕ ರಾಜ್ಯದ ಕ್ರೀಡಾ ಪೋಷಕರನ್ನು ಗುರುತಿಸಿ, ಗೌರವಿಸಲು ಅವರಿಗೆ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಅರ್ಹ ಕ್ರೀಡಾ ಪೋಷಕರಿಂದ 2022-23ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಆಗಸ್ಟ್ 3 ರ ಒಳಗಾಗಿ ಕಛೇರಿಗೆ ಸಲ್ಲಿಸಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಸಸಿ ನೆಡುವ ಮೂಲಕ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸಿಕೊಂಡ ಎಸ್.ಟಿ.ವೀರೇಶ್





ದಾವಣಗೆರೆ, ಜು.15- ಮಹಾನಗರ ಪಾಲಿಕೆ ಮಾಜಿ ಮಹಾಪೌರ ಎಸ್.ಟಿ.ವೀರೇಶ್ ಅವರ ಜನ್ಮ ದಿನವನ್ನು ಸರಳವಾಗಿ ಮನೋಮೇ ಲೇಔಟ್‌ನಲ್ಲಿ ಸಸಿನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಡಿಸಿಎಂ ಕ್ವಾರ್ಟರ್ಸ್ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಹಾಲಪ್ಪ, ಉಪಾಧ್ಯಕ್ಷ ಮೂಡಲಗಿರಿಯಪ್ಪ, ಪ್ರಧಾನ ಕಾರ್ಯದರ್ಶಿ ವಿಶ್ವನಾಥ್, ಶಾಂಭೋಜಿರಾವ್, ತಿರುಮಲೆ, ಶಿವನಪ್ಪ, ಅಕ್ಕಿ ವೀರಭದ್ರಪ್ಪ, ರಾಜು ಹುಲಿಕಟ್ಟೆ, ಗಣೇಶ್ ಲೇಔಟ್‌ನ ನಾಗರಿಕರಾದ ಶಿವಪ್ಪ, ಜಗದೀಶ್, ಬಾಬಣ್ಣ, ಹನುಮಂತ್, ಮುರುಗೇಶ್, ಪ್ರಕಾಶ್, ವೀರೇಶ್, ರಾಜು, 25ನೇ ವಾರ್ಡ್‌ನ ಸಮಸ್ತ ನಾಗರಿಕರು, ಕೆ.ಬಿ.ಬಡಾವಣೆ ನಾಗರಿಕರು, ಗಣೇಶ್ ಲೇಔಟ್ ನಾಗರಿಕರ ಸಮ್ಮುಖದಲ್ಲಿ ಜನ್ಮ ದಿನವನ್ನು ಆಚರಿಸಿಕೊಂಡರು.

ಗೋಶಾಲೆಯಲ್ಲಿ ಗೋವುಗಳಿಗೆ ವಿಶೇಷ ಪೂಜೆ ಹಾಗೂ ಮೇವು ವಿತರಣೆ, ಪೌರ ಕಾರ್ಮಿಕರಿಗೆ ಉಡುಗೊರೆ ನೀಡಿದರು. ಶಾಸ್ತ್ರಿಹಳ್ಳಿ ಹಳ್ಳಿಯ ವೃದ್ಧಾಶ್ರಮದ ಆಶ್ರಿತರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

## ಈರುಳ್ಳಿ ಖರೀದಿ

(1ನೇ ಪುಟದಿಂದ) 2022-23ರ ಸಾಲಿನಲ್ಲಿ ಸರ್ಕಾರ 2.50 ಲಕ್ಷ ಟನ್ ಈರುಳ್ಳಿ ಖರೀದಿ ಮಾಡ ಲಿದೆ. 2021-22ರ ಸಾಲಿನಲ್ಲಿ 2 ಲಕ್ಷ ಟನ್‌ಗಳ ಬಫರ್ ದಾಸ್ತಾನು ಹೊಂದಲಾಗಿತ್ತು. ಈ ವರ್ಷ 50 ಸಾವಿರ ಟನ್ ಹೆಚ್ಚುವರಿ ಖರೀದಿಯಾಗಲಿದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

## ನಿಟ್ಟೂರಿನಲ್ಲಿ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ



ಮಲೇಬೆನ್ನೂರು, ಜು.15- ನಿಟ್ಟೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ನಂದಿಗಾವಿ ಶ್ರೀನಿವಾಸ್ ಯುವ ಬ್ರಿಗೇಡ್ ವತಿಯಿಂದ ನೋಟ್ ಬುಕ್‌ಗಳನ್ನು ಶುಕ್ರವಾರ ಉಚಿತವಾಗಿ ವಿತರಿಸಲಾಯಿತು.

ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಹುರಳಿ ಹನುಮಂತಪ್ಪ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎಂ.ಪಿ. ಬಸವಂತ್, ಗ್ರಾ.ಪಂ. ಸದಸ್ಯರಾದ ಶ್ರೀಮತಿ ಅಕ್ಕಮ್ಮ, ಶ್ರೀಮತಿ ಲಕ್ಷ್ಮೀದೇವಿ, ಶ್ರೀಮತಿ ಸುನಂದಮ್ಮ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಿದರು.

ಈ ವೇಳೆ ಅಂತರರಾಷ್ಟ್ರೀಯ ಪಂಜ ಕುಸ್ತಿ ಪಂದ್ಯಾವಳಿಗೆ ಆಯ್ಕೆಯಾಗಿರುವ ಕುಂಬಳೂರಿನ ಕೆಂಚಪ್ಪ ಅವರನ್ನು ಯುವ ಬ್ರಿಗೇಡ್ ವತಿಯಿಂದ ಸನ್ಮಾನಿಸಲಾಯಿತು. ಯುವ ಬ್ರಿಗೇಡ್ ಕಾರ್ಯಕರ್ತರಾದ ಎಂ.ಆರ್. ಬೀರಪ್ಪ, ಮದನ್, ಮಂಜುನಾಥ್, ನವೀನ್, ಧರ್ಮಪ್ಪ, ಸಿದ್ದೇಶ್, ಬೀರೇಶ್ ದೊಡ್ಡಮನಿ, ನವೀನ್, ರವಿ ಮತ್ತು ಹರಳಹಳ್ಳಿ ಮಂಜುನಾಥ್ ಸೇರಿದಂತೆ ಶಾಲಾ ಶಿಕ್ಷಕರು, ಗ್ರಾಮಸ್ಥರು ಭಾಗವಹಿಸಿದ್ದರು.


**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಸುತ್ತ-ಮುತ್ತ 30x50 ಉತ್ತರ-ದಕ್ಷಿಣ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**ಮನೆ ಮಾರಾಟಕ್ಕಿದೆ**
J.H. Patel ಬಡಾವಣೆಯಲ್ಲಿ 30x40 East ಹೊಸ ಮನೆ. Ground Floor 2 Bed Room ಮನೆ 1Floor, 2 Room ಇದೇ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ರೂಂ ಬಾಡಿಗೆ ಇದೆ**
ಸುಸಜ್ಜಿತ ವಾಲ್ಡ್ರೋಬ್ ಅಟ್ಯಾಚ್ ಬಾತ್ ರೂಂ, 24ಗಂಟೆ ನೀರಿನ ವ್ಯವಸ್ಥೆವಿರುವ ರೂಂ 'ಎ' ಬ್ಲಾಕ್ ದೇವರಾಜ ಅರಸ್ ಬಡಾವಣೆಯಲ್ಲಿ ಬಾಡಿಗೆಗೆ ಇದೆ.
79750 35395

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಸಂಪರ್ಕಿಸಿ**
ಮದುವೆ ಸಮಾರಂಭಗಳಿಗೆ, ಎಚ್.ಡಿ ಮೇಕಪ್, ಗ್ಲಾಸಿ ಮೇಕಪ್, 3D ಮೇಕಪ್ ಮಾಡಿಕೊಡಲಾಗುವುದು.
99013 56428

**ಬೇಕಾಗಿದ್ದಾರೆ**
ಎಂ.ಇ.ಎಸ್ ಶಿಕ್ಷಣ ಸಂಸ್ಥೆ
ಆಂಜನೇಯ ಬಡಾವಣೆ, ದಾವಣಗೆರೆ
ಅನುಭವಿ ಬಾಯ್ಸ್ ಹಾಸ್ಟೆಲ್ ವಾರ್ಡನ್ ಅಡುಗೆ ಕೆಲಸ ಮಾಡಲು ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ
9880030171, 9880436414

**ಬಾಡಿಗೆಗೆ**
ಪಿ.ಜೆ ಬಡಾವಣೆ 8ನೇ ಮೇನ್, 8ನೇ ಕ್ರಾಸ್‌ನಲ್ಲಿ 3000 ಚ.ಅಡಿ ಮೊದಲನೇ ಮಹಡಿ ಬಾಡಿಗೆಗಿದೆ. (ಡಾ. ಸಿದ್ದೇಶ್ ಬಿಲ್ಡಿಂಗ್)
ಸಂಪರ್ಕಿಸಿ
94480 28103

**REQUIRED**
Computer Teacher for DRR SCHOOL
PB Road, Davangere
Contact immediately
98440 07624, 98454 47268

**ಬೇಕಾಗಿದ್ದಾರೆ**
ಟೈಲ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : **ಸಮ್ಯಕ್ ಸೆರಾಮಿಕ್ಸ್**
ಹದಡಿ ರೋಡ್, ಉದಯ ಸೂಪರ್ ಮಾರ್ಕೆಟ್ ಹತ್ತಿರ, ದಾವಣಗೆರೆ.
96200 95520

**ಆಯಾಗಳು ಬೇಕಾಗಿದ್ದಾರೆ**
ಸಂಪರ್ಕಿಸಿ :
ಎಸ್.ಟಿ. ಸೋಮಶೇಖರ್
ಯುನಿಕ್ ಸೆಕ್ಯೂರಿಟಿ ಆಫೀಸ್
ಹೆಬ್ಬಾರ್ ಕಾಂಪ್ಲೆಕ್ಸ್ ದಾವಣಗೆರೆ.
98803 37686

**ಸೈಟು ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ 3ನೇ ಮೇನ್ ರೋಡ್, 80x60 East
ದೀಪಕ್ ಪಿ.ವಿ.
97405 90636

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 North, 40x60 South, 80 ಅಡಿ ರೋಡಿಗಿದೆ. 30x40,30x40 South ಅಕ್ಕ ಪಕ್ಕ 30x50 West, 40 ಅಡಿ ರೋಡಿಗಿದೆ. Rate - 1750/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಚರ್ಚ್ ರಸ್ತೆ, ದಾವಣಗೆರೆ
63621 49155

**ಮನೆ ಬಾಡಿಗೆಗೆ**
1 BHK, 2 BHK, Room
ಶಾಮನೂರು ಡಾಲರ್ಸ್ ಕಾಲೋನಿ ಎದುರು, ತಿರುಮಲ ಬಾರ್ ಹತ್ತಿರ, ಜರಿಕಟ್ಟೆ ರಸ್ತೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
ಫೋ. : 93424 01115

**ಸೋಫ್ಲೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಗೋಡೌನ್ ಬಾಡಿಗೆಗೆ ಇದೆ**
ಹರಪನಹಳ್ಳಿ ಮುಖ್ಯರಸ್ತೆ, ಬಿ ಕಲ್ಪನಹಳ್ಳಿ ಗ್ರಾಮ, ಹೆಚ್.ಪಿ. ಪೆಟ್ರೋಲ್ ಬಂಕ್ ಹತ್ತಿರ 54 ಅಡಿ ಅಗಲ, 80 ಅಡಿ ಉದ್ದ ಇರುವ ಗೋಡೌನ್ ಬಾಡಿಗೆಗೆ ಇದೆ.
45 HP power supply available
80882 66100, 96112 56056
78292 07753

**2 BHK HOUSE FOR RENT**
Near Netravati Ladies Hostel, Ground Floor, Anjaneya Badavane, Davangere.
Ph. : 88845 64642

**ಹಿಟ್ಟಿನ ಗಿರಣಿ ಬಾಡಿಗೆಗೆ ದೊರೆಯುತ್ತದೆ**
ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ ಶ್ರೀ ಬಸವೇಶ್ವರ ಹಿಟ್ಟಿನ ಗಿರಣಿ ಬಾಡಿಗೆಗೆ ಇದೆ. 24 ಕಿ.ವ್ಯಾ. ವಿದ್ಯುತ್ ಸಂಪರ್ಕವಿರುವ ರಾಗಿ, ಜೋಳ, ಗೋದಿ, ಕಾರದ ಪುಡಿ, ಸಾಂಬಾರ ಪುಡಿ ಬೀಸುವ ಸುಸಜ್ಜಿತವಾದ ಹಿಟ್ಟಿನ ಗಿರಣಿ (50 ಕ್ವಿಂಟಾಲ್ ಸಂಗ್ರಹದ ಗೋದಾಮು ಇದೆ)
98441 91743, 99161 06139

**ಮನೆ ಅಥವಾ ಸೈಟ್ ಬೇಕಾಗಿದೆ**
ನಿಜಲಿಂಗಪ್ಪ ಲೇಔಟ್, ವಿನೋಬನಗರ, SS ಲೇಔಟ್, ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, ಸಿ ಬ್ಲಾಕ್, ಉತ್ತರ ಮತ್ತು ಪೂರ್ವ ದಿಕ್ಕಿಗೆ 30x40 ಮನೆ ಅಥವಾ ಸೈಟ್ ಬೇಕಾಗಿದೆ.
ಕೊಡುವವರು ಸಂಪರ್ಕಿಸಿರಿ : ಗಣೇಶ್ ಎಲ್. ಶೇಟ್
99166 84143, 74062 62024

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**WANTED**
Banking sector tele caller (Female Only)
Qualification - Any degree
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time : 11 AM

**ಮನೆ ಮಾರಾಟಕ್ಕಿದೆ**
16 3/4x 86= 1440.5 ಅಡಿ ಅಳತೆಯ ನೆಲ ಮಹಡಿ & ಮೊದಲನೇ ಮಹಡಿ ಇರುವ ಮನೆಯು # 977/1 ದಾವಣಗೆರೆ ಮಹಾನಗರದ ಹಳೇಪೇಟೆಯಲ್ಲಿ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
93434 75963, 97401 63814

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
ಪ್ರಖ್ಯಾತ ಐ.ಟಿ. ಕಂಪನಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಹೌಸ್ ಕೀಪಿಂಗ್ ಕೆಲಸಕ್ಕೆ ಹಾಗೂ ಟೆಲಿಫೋನ್ ಆಪರೇಟರ್ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30 ವರ್ಷಗಳು. ಸೌಲಭ್ಯಗಳು : ಸಂಬಳ, ಬೋನಸ್, ಲೀವ್ ಪೇಮೆಂಟ್, ಯೂನಿಫಾರ್ಮ್, ಶೂಸ್, ಪಿ.ಎಫ್., ಇಎಸ್‌ಐ., ಗ್ರಾಚ್ಯುಟಿ ಮತ್ತು ಇತರೆ ಸೌಲಭ್ಯವಿರುತ್ತದೆ.
99002 67373, 99002 77949, 99005 19554

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block, Near Swimming Pool, Davangere.
98440 65638

**FLAT FOR SALE**
2 and 3 Bedroom Flat For Sale Om Sai Balaji Apartment, Near Bapuji High School, Near Retired Government Employees Bhavan, MCC 'B' Block Davanagere.
98452 62032, 94498 24866

**House For Rent**
2 BHK Indipendent House For Rent
# 630, 7th Main P.J. Extn opp: Sandeep Nursing Home Residential Commercial (Drs Clinic also)
99722 93785
(Veg-Only)

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಬೇಕಾಗಿದ್ದಾರೆ**
B.A., B.Ed., NTC, B.Sc., B.com. ಹಾಗೂ ದೈಹಿಕ ಶಿಕ್ಷಣ ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
ನಂದಗೋಕುಲ ಶಾಲೆ (ಆಂಗ್ಲಮಾಧ್ಯಮ)
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ದಾವಣಗೆರೆ.
99640 17729

**ಬೇಕಾಗಿದ್ದಾರೆ**
ವೆಜ್/ನಾನ್‌ವೆಜ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು 1. ತಂದೂರಿ ಕುಕ್ ಮತ್ತು ಸ್ಟಾಫ್‌ಗಳು ಬೇಕಾಗಿದ್ದಾರೆ
99867 22992

**ಗೈಡುಗಳು ದೊರೆಯುತ್ತವೆ**
ದಾವಣಗೆರೆ ವಿಶ್ವವಿದ್ಯಾನಿಲಯದ B.A., B.Com., BBA 2nd semister English ಗೈಡುಗಳು ದೊರೆಯುತ್ತವೆ. ಸಂಪರ್ಕಿಸಿ :
ಚೇತನ ಬುಕ್ ಹೌಸ್,
ಅಕ್ಕಮಹಾದೇವಿ ರಸ್ತೆ, ದಾವಣಗೆರೆ.
80504 07799

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**Coaching Class/ Tuitions/ Dance Class/Courier office&Godown**
Separate Floor 4/3/2 room attached option, Hall 14×28 big with one Al Partition, Near Batli building & BIET, Shamanur road, behind IDFC bank DVG
97835 15551

**ಬೇಕಾಗಿದ್ದಾರೆ**
ಆರೆಂಜ್ ಕಾರ್ ಕೇರ್
ವಿದ್ಯಾನಗರ ಮುಖ್ಯ ರಸ್ತೆ, ದಾವಣಗೆರೆ.
ಹುದ್ದೆ - ಕಾರ್ ಸರ್ವೀಸ್ ಅಡ್ವೈಸರ್ -1 (ಗಂಡು) ಅನುಭವ: ಕನಿಷ್ಠ 1 ವರ್ಷ
ಹುದ್ದೆ: ಅಕೌಂಟೆಂಟ್
ಅನುಭವ: 1 ರಿಂದ 2 ವರ್ಷ ಆಕರ್ಷಕ ಸಂಬಳ
81235 06863, 99640 71556

**For Sale**
2BHK Flat for Sale, MCC `B' Block, davanagere.
Contact :
96863 96992, 99001 18054

**ಜಮೀನು ಮಾರಾಟಕ್ಕಿದೆ**
ಯಾವುದೇ ವಿವಾದ ಇಲ್ಲದ 2ಎ.30ಗುಂ, ನೀರಾವರಿ ಜಮೀನು ಹರಿಹರ ತಾ. ಬನ್ನಿಕೋಡು ಹತ್ತಿರ ಮಾರಾಟಕ್ಕಿದೆ. ರೂ. 19.5 ಲ/ಎ
82175 77184

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000
95352 43598
08192-261003
99161 43003

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

**Site ಮಾರಾಟಕ್ಕಿದೆ**
ಶಾಮನೂರಿನ Podar School ಹತ್ತಿರ (30x40) ದಕ್ಷಿಣ Site ಮಾರಾಟಕ್ಕಿದೆ. ಸಂಪರ್ಕಿಸಿ:
95918 29780
80731 78139

**ಬೇಕಾಗಿದ್ದಾರೆ**
DTP Operator - 02
Office Boy - 02
ಅನುಭವ ಇರುವವರಿಗೆ ಮೊದಲ ಆದ್ಯತೆ
ಸ್ಥಳ: ವಿನ್ನರ್ಸ್‌ಕರಿಯರ್ ಅಕಾಡೆಮಿ
2ನೇ ಮುಖ್ಯ ರಸ್ತೆ, P.J ಬಡಾವಣೆ ದಾವಣಗೆರೆ
91485 96892, 98869 97892

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ 12,000. ಸಸ್ಯಹಾರಿ, ಮಾಂಸಹಾರಿ ಗೊತ್ತಿರಬೇಕು. ಊಟ, ರೂಂ. ಉಚಿತ ಸಂಪರ್ಕಿಸಿ :
97400 98064,
97400 98047

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**Accountiest**
Part Time / Full
Tally / MS Office
78920 01147
83105 55646

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI | ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray | ಆಪರೇಷನ್ ಟೆಕ್ನಾಲಜಿ DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ, ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**WANTED**
Computer Operator Cum Receptionist.
Gents, Day and Night.
Contact :
Shramajeevi Delux Lodge
Davangere
99869 16627

**Change Of Name**
I, N.P. Parameshwaraiah S/o N.P. Channayya aged about 52 years R/o Yaragunte, Ashoka nagar, Davanagere has changed my name as PARAMA PUJYA SRI PARAMESHWARA SWAMIGALU on 15.7.2022 in front of Davanagere notary. In future all my records and transanctions are will be in my new name as undersigned.
Parama Pujya Sri Parameshwara Swamigalu

**Wanted Teachers**
B.Sc / B.Ed, Maths Science, English
Good Communication & Fluency in English
99641 10736

**LEWA**
Proffessional Makeup Artist Course & Beauty Courses Conducting here
Contact No :
81971 79414, 78924 68118

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಭಾರತದ ಹೆಸರಾಂತ ಯುರೇಖಾ ಫೋರ್ಬಸ್ ಕಂಪನಿಗೆ Eureka Forbes Ltd., PUC,ITI, Degree ಆದ ಯುವಕ-ಯುವತಿಯರು ಬೇಕಾಗಿದ್ದಾರೆ.
99807 65583, 93800 13021

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

# ಜನಸಂಖ್ಯೆ ಹೆಚ್ಚಳದಿಂದ ಸಾಮಾಜಿಕ, ಆರ್ಥಿಕ ದುಷ್ಪರಿಣಾಮ

## ಶಾಸಕ ರವೀಂದ್ರನಾಥ್



ದಾವಣಗೆರೆ, ಜು. 15- ದೇಶದಲ್ಲಿ ಜನಸಂಖ್ಯಾ ಹೆಚ್ಚಳದಿಂದ ಸಾಮಾಜಿಕ ಹಾಗೂ ಆರ್ಥಿಕ ದುಷ್ಪರಿಣಾಮಗಳು ಹೆಚ್ಚಾಗುತ್ತವೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ವಿಶ್ವ ಜನಸಂಖ್ಯಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಜನಸಂಖ್ಯೆ ಹೆಚ್ಚಾಗುತ್ತಿರುವ ಪ್ರಸ್ತುತ ದಿನಗಳಲ್ಲಿ ಯುವ ಪೀಳಿಗೆಯು ಮಿತ ಸಂತಾನಕ್ಕೆ ಆದ್ಯತೆ ನೀಡಬೇಕು. ಕುಟುಂಬಕ್ಕೆ ಒಂದು ಮಗು ಸಾಕು ಎನ್ನುವ ನಿರ್ಧಾರಕ್ಕೆ ಬರಬೇಕಿದೆ ಹಾಗೂ ಮಕ್ಕಳಿಗೆ ಉತ್ತಮ ಶಿಕ್ಷಣ, ಮೂಲ ಸೌಲಭ್ಯಗಳನ್ನು ಕೊಡಿಸುವಲ್ಲಿ ಮುಂದಾಗಬೇಕು ಎಂದು ಹೇಳಿದರು. ಅಮೇರಿಕಾ, ರಷ್ಯಾ ಮುಂತಾದ ಮುಂದುವರೆದ ರಾಷ್ಟ್ರಗಳಲ್ಲಿ ಜನಸಂಖ್ಯೆ ಕಡಿಮೆ ಇದೆ. ಕಾರಣ ಅಲ್ಲಿ ಹಲವಾರು ನಿಯಂತ್ರಣ ಕ್ರಮಗಳಿವೆ. ಆದರೆ ನಮ್ಮ ದೇಶದಲ್ಲಿ ಯಾವುದೇ ನಿಯಂತ್ರಣ ಕ್ರಮಗಳಿಲ್ಲ. ಈ ಕಾರಣದಿಂದಾಗಿ ನಮ್ಮ ದೇಶದಲ್ಲಿ ಜನಸಂಖ್ಯೆ 137 ಕೋಟಿ ದಾಟಿದೆ. ಈ ನಿಟ್ಟಿನಲ್ಲಿ ಜನಸಂಖ್ಯಾ ನಿಯಂತ್ರಣ ಅತ್ಯಗತ್ಯ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಹೆಚ್.ಎಂ. ರೇಣುಕಾರಾಧ್ಯ ಮಾತಾಡುತ್ತಾ, ಜನಸಂಖ್ಯೆ ಹೆಚ್ಚಳವಾದಂತೆ ಬಡತನವೂ ಹೆಚ್ಚಾಗಲು ಕಾರಣವಾಗುತ್ತದೆ ಎಂದು ಹೇಳಿದರು.

ದೇಶದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಆಹಾರ, ನೀರು, ಬಟ್ಟೆ, ವಸತಿ ಖನಿಜ ಸಂಪತ್ತಿನ ಕೊರತೆ ಮಾತ್ರವಲ್ಲದೆ, ಸಸ್ಯ ಸಂಪತ್ತಿನ ಕೊರತೆಯೂ ಹೆಚ್ಚಾಗುತ್ತದೆ ಎಂದು ಎಚ್ಚರಿಸಿದರು. ಶಬ್ದ ಮಾಲಿನ್ಯ, ಪರಿಸರ ಮಾಲಿನ್ಯವೂ ಉಂಟಾಗುತ್ತದೆ. ಅಲ್ಲದೆ ಸಾಮಾಜಿಕ ಅಸಮಾನತೆ, ನಗರ ಪ್ರದೇಶದ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳ ಉಲ್ಬಣ, ವಸತಿ ಮತ್ತು ಸಾರಿಗೆ ಮೇಲೆ ಒತ್ತಡ ಬೀಳಲಿದೆ.

ಸಾಂಕ್ರಾಮಿಕ ರೋಗಗಳು ಸೇರಿದಂತೆ ವಿವಿಧ ರೋಗಗಳು ಹೆಚ್ಚಾಗುತ್ತವೆ. ಆದ್ದರಿಂದ ಜನಸಂಖ್ಯೆ ನಿಯಂತ್ರಣದತ್ತ ಗಮನ ಹರಿಸಬೇಕು ಎಂದು ಹೇಳಿದರು.

ಭಾರತದಲ್ಲಿ ಯುವ ಜನರೇ ಹೆಚ್ಚಾಗಿದ್ದಾರೆ. ಇವರು ಮುಂಬರುವ ದಿನಗಳಲ್ಲಿ ಸಂಸಾರದ ನಿರ್ವಹಣೆ ವೇಳೆ ಜನಸಂಖ್ಯಾ ನಿಯಂತ್ರಣದ ಬಗ್ಗೆಯೂ ಗಮನ ಹರಿಸಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಡಾ.ಎಸ್.ಎಂ. ಲತಾ ಉಪನ್ಯಾಸ ನೀಡಿದರು. ಜಿಲ್ಲಾ ಚಿಗಟೇರಿ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಷಣ್ಮುಖಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ಆರ್. ಅಂಜಿನಪ್ಪ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಮುರಳೀಧರ್ ಇತರರು ಉಪಸ್ಥಿತರಿದ್ದರು.

# ಜೋಗ ಮತ್ತು ಶಿರಸಿಗೆ ವಿಶೇಷ ಪ್ಯಾಕೇಜ್ ಸಾರಿಗೆ ವ್ಯವಸ್ಥೆ



ದಾವಣಗೆರೆ ಜು.15 - ಪ್ರತಿ ವರ್ಷದಂತೆ ಈ ವರ್ಷ ಜುಲೈ 17 ರಿಂದ ಪ್ರತಿ ಭಾನುವಾರ ಅಥವಾ ರಜಾ ದಿನಗಳಂದು ದಾವಣಗೆರೆ ಮತ್ತು ಹರಿಹರದಿಂದ ಶಿರಸಿ ಹಾಗೂ ವಿಶ್ವವಿಖ್ಯಾತ ಪ್ರೇಕ್ಷಣೀಯ ಸ್ಥಳವಾದ ಜೋಗಫಾಲ್ಸ್‌ಗೆ ವಿಶೇಷ ಪ್ಯಾಕೇಜ್ ಸಾರಿಗೆ ವ್ಯವಸ್ಥೆ ಅಡಿಯಲ್ಲಿ ಪ್ರವಾಸ ಕೈಗೊಳ್ಳಲು ರಾಜಹಂಸ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

**ಸಮಯ ಹಾಗೂ ಪ್ರಯಾಣ ದರದ ವಿವರ ಇಂತಿವೆ :** ಬೆಳಿಗ್ಗೆ 7 ಗಂಟೆಗೆ ದಾವಣಗೆರೆ ಶಿರಸಿ ಮಾರ್ಗವಾಗಿ ಜೋಗಫಾಲ್ಸ್‌ಗೆ ತಲುಪುವುದು. ಮಧ್ಯಾಹ್ನ 12 ಗಂಟೆಗೆ ಶಿರಸಿ ಯಿಂದ ಜೋಗ, ಸಂಜೆ 4.30ಕ್ಕೆ ಜೋಗ ದಿಂದ ದಾವಣಗೆರೆ ನೇರವಾಗಿ ಆಗಮಿಸಲಿದೆ. ಪ್ರಯಾಣಿಕರ ದರ 600 ರೂ. ಮಕ್ಕಳಿಗೆ 450 ರೂ. (2 ಬದಿ ಸೇರಿ) ಹಾಗೂ ಬೆಳಿಗ್ಗೆ 7.30ಕ್ಕೆ ಹರಿಹರದಿಂದ ಶಿರಸಿಗೆ, ಮಧ್ಯಾಹ್ನ 12.30ಕ್ಕೆ ಶಿರಸಿಯಿಂದ ಜೋಗಕ್ಕೆ, ಸಂಜೆ 4.30ಕ್ಕೆ ಜೋಗದಿಂದ ಹರಿಹರಕ್ಕೆ ಬರುವ ವ್ಯವಸ್ಥೆ ಇದ್ದು, ನೇರ ಪ್ರಯಾಣಿಕರ ದರ 575 ರೂ. ಹಾಗೂ ಮಕ್ಕಳಿಗೆ 430 ರೂ.ಇರುತ್ತದೆ ಎಂದು ಕ.ರಾ.ರ.ಸಾ.ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

# ಎ.ಐ.ಎಫ್. ಯೋಜನೆಗೆ 23 ಸಾವಿರ ಕೋಟಿ ರೂ. ಪ್ರಸ್ತಾಪ

ಬೆಂಗಳೂರು, ಜು. 15 – ಕೃಷಿ ಮೂಲಭೂತ ಸೌಲಭ್ಯ ನಿಧಿ (ಎ.ಐ.ಎಫ್.) ಯೋಜನೆಯಡಿ 23 ಸಾವಿರ ಕೋಟಿ ರೂ.ಗಳ ಹೂಡಿಕೆ ಪ್ರಸ್ತಾಪಗಳು ಬಂದಿವೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

ಕಟಾವಿನ ನಂತರ ಕೃಷಿ ಉತ್ಪನ್ನಗಳ ನಿರ್ವಹಣೆಗಾಗಿ ಹೂಡಿಕೆ ಮಾಡುವ ಸಲುವಾಗಿ ಎ.ಐ.ಎಫ್. ಯೋಜನೆ ರೂಪಿಸಲಾಗಿತ್ತು. ಈ ಯೋಜನೆಯ ಮೂಲಕ ಹೂಡಿಕೆಗಳಿಗೆ ಬಡ್ಡಿ ವಿನಾಯಿತಿ ಹಾಗೂ ಹಣಕಾಸು ಬೆಂಬಲ ನೀಡಲಾಗುವುದು. ಈ ಯೋಜನೆಯ ಮೂಲಕ 2025-26ರ ಒಳಗೆ ಲಕ್ಷ ಕೋಟಿ ರೂ.ಗಳನ್ನು ವಿತರಿಸಲು ಉದ್ದೇಶಿಸಲಾಗಿದೆ.

ಯೋಜನೆಯಡಿ 23 ಸಾವಿರ ಕೋಟಿ ರೂ.ಗಳ ಪ್ರಸ್ತಾವನೆ ಗಳು ಬಂದಿವೆ. ಈ ಪೈಕಿ 13 ಸಾವಿರ ಕೋಟಿ ರೂ.ಗಳ ಪ್ರಸ್ತಾವನೆ ಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತೋಮರ್ ತಿಳಿಸಿದ್ದಾರೆ.

# ಪಕ್ಷಾಂತರ ತಡೆ ಕಾಯ್ದೆ ತಿದ್ದುಪಡಿಗೆ ಮೂಡದ ಒಮ್ಮತ

ನವದೆಹಲಿ, ಜು. 15 – ಪಕ್ಷಾಂತರ ತಡೆ ಕಾಯ್ದೆಗೆ ತಿದ್ದುಪಡಿ ತರುವ ಕುರಿತು ಪೀಠಾಸೀನಾಧಿಕಾರಿಗಳ ಸಭೆಯಲ್ಲಿ ಒಮ್ಮತ ಸಾಧ್ಯವಾಗಿಲ್ಲ. ಈ ವಿಷಯದ ಬಗ್ಗೆ ಸಮಾಲೋಚನೆ ನಡೆಸಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ಪಕ್ಷಾಂತರ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಸಭೆಗಳ ಮುಖ್ಯಸ್ಥರಿಗೆ ಹೆಚ್ಚಿನ ಅಧಿಕಾರ ಇರಬೇಕೇ ಅಥವಾ ರಾಜಕೀಯ ಪಕ್ಷಗಳ ಮುಖ್ಯಸ್ಥರಿಗೆ ಹೆಚ್ಚಿನ ನೀಡಬೇಕೇ ಎಂಬ ಬಗ್ಗೆ ಒಮ್ಮತ ಮೂಡದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

# ಸರ್ಕಾರಿ ಕಚೇರಿಗಳಲ್ಲಿ ಮೊಬೈಲ್ ನಿಷೇಧ : ಆದೇಶ ಹಿಂಪಡೆಗೆ ಆಗ್ರಹ

ದಾವಣಗೆರೆ, ಜು.15- ಸರ್ಕಾರಿ ಕಚೇರಿಗಳಲ್ಲಿ ಮೊಬೈಲ್ ನಿಷೇಧಿಸಿರುವ ಸರ್ಕಾರದ ಆದೇಶವು ಹಾಸ್ಯಾಸ್ಪದ. ಭ್ರಷ್ಟಾಚಾರದಲ್ಲಿ ತೂಕಡಿಸುತ್ತಿರುವ ಸರ್ಕಾರಿ ಅಧಿಕಾರಿಗಳಿಗೆ ಸರ್ಕಾರವೇ ಹಾಸಿಗೆ ಹಾಸಿ ಕೊಟ್ಟಂತಾಗಿದೆ ಎಂದು ಜೆಡಿಎಸ್ ನ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಬಾತಿ ಶಂಕರ್ ಆರೋಪಿಸಿದ್ದಾರೆ.

ಭ್ರಷ್ಟ ಅಧಿಕಾರಿಗಳಿಂದ ಬೇಸತ್ತು ರೋಸಿ ಹೋದ ಸಾರ್ವಜನಿಕರು ಅವರ ಭ್ರಷ್ಟಾಚಾರವನ್ನು ಮೊಬೈಲ್ ನಲ್ಲಿ ಸೆರೆ ಹಿಡಿಯುವ ಮೂಲಕ ಬಯಲು ಮಾಡಲು ಮುಂದಾಗುತ್ತಾರೆ. ಆದರೆ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರು ಮೊಬೈಲ್ ತರೋದನ್ನು ನಿಷೇಧಿಸುವ ಆದೇಶ ಮಾಡುವ ಮೂಲಕ ಸರ್ಕಾರ ಸ್ವತಃ ಭ್ರಷ್ಟಾಚಾರಿಗಳಿಗೆ ಕುಮ್ಮಕ್ಕು ಮಾಡಿಕೊಟ್ಟಂತಾಗಿದೆ ಎಂದು ದೂರಿದ್ದಾರೆ.

ಅವೈಜ್ಞಾನಿಕವಾಗಿರುವ ಈ ಆದೇಶವನ್ನು ತಕ್ಷಣವೇ ಸರ್ಕಾರ ಹಿಂಪಡೆಯಬೇಕೆಂದು ಆಗ್ರಹಿಸಿದ್ದಾರೆ.

# ನಗರದಲ್ಲಿ ಇಂದು ವನಿತಾ ವೈದ್ಯ ವೇದಿಕೆ ಉದ್ಘಾಟನೆ

ವನಿತಾ ವೈದ್ಯ ವೇದಿಕೆ ಉದ್ಘಾಟನಾ ಸಮಾರಂಭ ಇಂದು ಸಂಜೆ 5.30 ಕ್ಕೆ ವನಿತಾ ಸೇವಾ ಸಮಾಜದಲ್ಲಿ ನಡೆಯುವುದು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಮತಿ ಡಾ. ನಾಗಮ್ಮ ಕೇಶವಮೂರ್ತಿ ವಹಿಸುವರು. ಶ್ರೀಮತಿ ಪದ್ಮಾ ಪ್ರಕಾಶ್, ಡಾ. ವನಜಾ ನಾರ್ವೇಕರ್, ಡಾ. ಶಾಂತ ಭಟ್ ಭಾಗವಹಿಸುವರು.

# ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಎನ್.ಆರ್.ನಾಗಭೂಷಣ ರಾವ್



ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಎನ್.ಆರ್. ನಾಗಭೂಷಣ ರಾವ್, ಕಾರ್ಯದರ್ಶಿಯಾಗಿ ಕಣವಿ ನಟರಾಜ್, ಖಜಾಂಚಿಯಾಗಿ ಎಸ್.ಕೆ. ಮಲ್ಲಿಕಾರ್ಜುನ್, ಸಹ ಕಾರ್ಯದರ್ಶಿಯಾಗಿ ಭೀಮಾನಂದ ಶೆಟ್ಟಿ ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು ಸಂಜೆ 6.30 ಕ್ಕೆ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಪ್ರಸನ್ನಕುಮಾರ್ ಕೆ.ಬಿ., ಪಿ. ಮಹಾಬಲೇಶ್ವರಗೌಡ ಆಗಮಿಸುವರು. ಪ್ರತಿಷ್ಠಾಪನಾಧಿಕಾರಿಯಾಗಿ ನೀಲಕಂಠ ಎಂ. ಹೆಗಡೆ ಆಗಮಿಸುವರು. ಹೆಚ್.ಎಸ್. ಮಂಜಪ್ಪ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧನೆ ಮಾಡುವರು. ಮುಖ್ಯ ಅತಿಥಿಗಳಾಗಿ ಡಾ. ಎಂ.ಕೆ. ಭಟ್ ಆಗಮಿಸುವರು. ಅಧ್ಯಕ್ಷತೆಯನ್ನು ಎಸ್. ಓಂಕಾರಪ್ಪ ವಹಿಸುವರು.

**ನೂತನ ಪದಾಧಿಕಾರಿಗಳು :** 1ನೇ ಉಪಾಧ್ಯಕ್ಷರಾಗಿ ನೀಲಿ ಉಮೇಶ್, 2ನೇ ಉಪಾಧ್ಯಕ್ಷರಾಗಿ ಎಸ್.ಜಿ. ಉಳುವಯ್ಯ, 3ನೇ ಉಪಾಧ್ಯಕ್ಷರಾಗಿ ಎನ್.ಸಿ. ಬಸವರಾಜ್, ಲಯನ್ ಟೇಮರ್ ಆಗಿ ಮಹಾಲಿಂಗಪ್ಪ ಕೆ.ಟಿ, ಲಯನ್ ಟೈಲ್ ಟ್ವಿಸ್ಟರ್ ಆಗಿ ಪಿ.ಹೆಚ್. ಗೋವಿಂದರಾಜ್, ಪಿ.ಆರ್.ಓ ಆಗಿ ಅಜಯ್ ನಾರಾಯಣ್ ಸಿ., ಸದಸ್ಯತ್ವ ಸಮಿತಿಗೆ ಛೇರ್ಮನ್ ಆಗಿ ದೇವರಮನಿ ನಾಗರಾಜ್, ಕ್ಲಬ್ ವಿಸ್ತರಣಾ ಸಮಿತಿ ಛೇರ್ಮನ್ ಆಗಿ ಎನ್.ವಿ. ಬಂಡಿವಾಡ್, ಕ್ಲಬ್ ಮಾರ್ಕೆಟಿಂಗ್ ಆಗಿ ಬೆಳ್ಳೂಡಿ ಶಿವಕುಮಾರ್, ಛೇರ್ಮನ್ ಎಲ್‌ಸಿಐಎ ಎಫ್ ಕೋ ಆರ್ಡಿನೇಟರ್ ಆಗಿ ಹೆಚ್.ಸಿ. ಹನುಮಂತಪ್ಪ, ಪ್ರಚಾರ ಸಮಿತಿ ಛೇರ್ಮನ್ ಆಗಿ ಇ.ಎಂ. ಮಂಜುನಾಥ ಪದಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸುವರು.

**ಸಲಹೆಗಾರರು :** ಡಾ. ಬಿ.ಎಸ್. ನಾಗಪ್ರಕಾಶ್, ಆರ್.ಜಿ. ಶ್ರೀನಿವಾಸ ಮೂರ್ತಿ, ಎ.ಎಸ್. ಮೃತ್ಯುಂಜಯ.

**ನಿರ್ದೇಶಕರು :** ಬಿ.ವಿ. ಗಂಗಪ್ಪ ಶೆಟ್ಟಿ, ಎಂ.ವಿ.ವಿ. ಸತ್ಯನಾರಾಯಣ, ಬಿ.ವಿ. ಶ್ರೀಧರಮೂರ್ತಿ, ಆರ್. ಎಸ್. ರವೀಂದ್ರ, ಎ. ನಾಗರಾಜ್, ವಿವೇಕ್ ಸಿಂಗ್, ಎನ್.ಕೆ. ಕೊಟ್ರೇಶ್, ಎಂ. ಬಸವರಾಜಪ್ಪ, ಕೋರಿ ಶಿವಕುಮಾರ್, ಹೆಚ್.ಎಂ. ನಾಗರಾಜ್, ಸಜ್ಜನ್ ನಾಗರಾಜ್, ಸೋಗಿ ಮುರುಗೇಶ್, ಆನಂದಕಂದ ಆರ್. ನಲ್ಲೂರು ಎಸ್. ರಾಘವೇಂದ್ರ, ಕೆ. ಮುರುಗೇಶಪ್ಪ, ಜಂಬಿಗಿ ರಾಧೇಶ್, ಪ್ರವೀಣ್‌ರಾವ್ ಎಂ. ಪವಾರ್, ರಂಗನಾಥಶೆಟ್ಟಿ ಕೆ.ವಿ., ಬಿ.ರಮೇಶ್, ಮುರಳೀಧರ್ ಗುಪ್ತ ಎಂ. ಎನ್., ಹೆಚ್.ಕೆ. ಹೇಮಣ್ಣ, ವಿನಾಯಕ ಜೆ.ಓ., ಕೆ. ಶಿವಕುಮಾರ್, ಸಂಪತ್ ಬಿ. ಹಳ್ಳಿಕೇರೆ, ಎಂ.ಎಸ್. ಉದಯಕುಮಾರ್, ಟಿ.ವಿ. ಸುಬ್ಬರಾಜ್, ಹೆಚ್.ಸಿ. ರವಿಶಂಕರ್ ವಾಲಿ, ಬಿ.ಎಲ್. ಗೌಡ, ಆರ್.ಎನ್. ನಾಗೇಂದ್ರ, ವಿವೇಕಾನಂದ ಪಿ., ಮಾಳಗಿ ಷಣ್ಮುಖಪ್ಪ, ಹೆಚ್.ಕೆ. ಹೇಮಣ್ಣ, ಎಂ.ವಿ. ಶಿವಕುಮಾರ್, ಪಿ.ಸಿ. ಜಗದೀಶ್‌ಕುಮಾರ್, ಬಿ. ಎಸ್. ಶಿವಾನಂದ, ಸಂತೋಷ್‌ಕುಮಾರ್ ಕೆ.ಎಸ್.

# ಹರಪನಹಳ್ಳಿ ಪುರಸಭೆ ಅಧ್ಯಕ್ಷ ಹೆಚ್.ಎಂ.ಅಶೋಕ್ ಅಧಿಕಾರ ಸ್ವೀಕಾರ



ಹರಪನಹಳ್ಳಿ, ಜು.15- ಪಟ್ಟಣದ ಪುರಸಭೆ ಕಚೇರಿಯಲ್ಲಿ ನೂತನ ಪುರಸಭೆ ಅಧ್ಯಕ್ಷ ಹೆಚ್.ಎಂ. ಅಶೋಕ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಸ್ಥಳೀಯ ಪುರಸಭೆ ಕಚೇರಿಯಲ್ಲಿ ತಮ್ಮ ಕೊಠಡಿಯಲ್ಲಿ ಶಾಸಕ ಜಿ. ಕರುಣಾಕರ ರೆಡ್ಡಿ ಅವರೊಂದಿಗೆ ವಿಶೇಷ ಪೂಜೆ ನೆರವೇರಿಸಿ, ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಇಜಂತಕರ್, ಸದಸ್ಯರಾದ ರೊಕ್ಕಪ್ಪ, ಕಿರಣ್‌ಕುಮಾರ್, ಜಾವೀದ್, ಗೌಳಿ ವಿನಾಯಕ, ತಾರಾ ಹನುಮಂತಪ್ಪ, ಭರತೇಶ ಜೋಗಿನ್ವರ್, ಜಾಕೀರ್ ಹುಸೇನ್, ಎಂ.ಕೆ. ಜಾವೀದ್, ದ್ಯಾಮಜ್ಜಿ ರೊಕ್ಕಪ್ಪ, ಮುಖಂಡರಾದ ಗುಂಡಿ ಮಂಜುನಾಥ, ಕಣಿವಿಹಳ್ಳಿ ಮಂಜುನಾಥ, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಸೇರಿದಂತೆ ಇತರರು ಇದ್ದರು.

# ವಿಶ್ವ ಜನಸಂಖ್ಯಾ ದಿನಾಚರಣೆ : ಜಾಥಾಕ್ಕೆ ಚಾಲನೆ



ದಾವಣಗೆರೆ ಜು.15 - ವಿಶ್ವ ಜನಸಂಖ್ಯಾ ದಿನಾಚರಣೆ-2022 ಹಿನ್ನೆಲೆಯಲ್ಲಿ 'ಕುಟುಂಬ ಯೋಜನೆ ಉಪಾಯಗಳನ್ನು ನಮ್ಮದಾಗಿಸಿ, ಉನ್ನತಿಯ ಹೊಸ ಅಧ್ಯಾಯ ಬರೆಯೋಣ' ಎಂಬ ಘೋಷಣೆಯೊಂದಿಗೆ ಶುಕ್ರವಾರ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಡಿಹೆಚ್‌ಒ ಡಾ.ನಾಗರಾಜ್, ಡಾ.ರೇಣುಕಾರಾಧ್ಯ, ಆರ್.ಸಿ.ಹೆಚ್ ಅಧಿಕಾರಿ ಡಾ.ಮೀನಾಕ್ಷಿ.ಕೆ.ಎಸ್, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಷಣ್ಮುಖಪ್ಪ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಗಂಗಾಧರ್, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ಮುರುಳೀಧರ್ ಹಾಗು ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ಸಂವಾದ

ಬೆಸ್ಕಾಂ ನಗರ ಉಪ ವಿಭಾಗ-2 ರಿಂದ ಇಂದು ಮಧ್ಯಾಹ್ನ 3 ಕ್ಕೆ ಗ್ರಾಹಕರ ಸಂವಾದ ನಡೆಯಲಿದೆ. ಅಂಬೇಡ್ಕರ್ ವೃತ್ತದ ಬಳಿ ಇರುವ ನಗರ ಉಪ ವಿಭಾಗ- 2 ಕಚೇರಿಯಲ್ಲಿ ಹಾಜರಾಗಬೇಕು.

# ನಗರದಲ್ಲಿಂದು ಪ್ರತಿಭಾ ಪುರಸ್ಕಾರ

ಚಿಗಟೇರಿ ಲೇಔಟ್ ಸಪ್ತಗಿರಿ ಸ್ಕೂಲ್ ಹಿಂಭಾಗದಲ್ಲಿರುವ ಹರಳೆಣ್ಣೆ ಕೊಟ್ಟೂರು ಬಸವಪ್ಪ ಎಜುಕೇಷನ್ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 10.35 ಕ್ಕೆ ನಡೆಯುವುದು. ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಹೆಚ್.ಬಿ. ಮಂಜುನಾಥ್ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಮತಿ ನೀಲಾಂಬಿಕೆ ಶರಣಪ್ಪ ವಹಿಸುವರು. ಜಂಬಿಗಿ ಮೃತ್ಯುಂಜಯ ಪ್ರಾಸ್ತಾವಿಕ ನುಡಿಯುವರು.

# ನಗರದಲ್ಲಿ ಇಂದು ಚದುರಂಗ ತರಬೇತಿ

ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇ ಷನ್ ಹಾಗೂ ನ್ಯೂ ದಾವಣಗೆರೆ ಜಿಲ್ಲಾ ಚೆಸ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯ ದಲ್ಲಿ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳಿಗಾಗಿ ಉಚಿತ ಚದುರಂಗ (ಚೆಸ್) ತರಬೇತಿ ಶಿಬಿರವು ರೋಟರಿ ಬಾಲಭವನದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್: 9880903417, 9844153466.


## ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ

ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.

Mediworld Pharma C/o
AKP Healthcare Pvt. Ltd
Hadadi Rd, opp. Taralabalu school,
Shrinivaasa Nagara, Davanagere, Karnataka 577005
Mob: 96865 52532






## ಜನ್ಮ ದಿನದ ಶುಭಾಶಯಗಳು

ರಿಯಲ್ ಎಸ್ಟೇಟ್ ಉದ್ಯಮಿಗಳೂ,
ಜಮೀನ್ದಾರರೂ, ನಮ್ಮ ಆತ್ಮೀಯರೂ ಆದ
ಶ್ರೀ ಭಾಸ್ಕರ್ ರಾವ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರು ನೂರಾರು ಕಾಲ
ಸುಖ-ಸಂತೋಷದಿಂದ ಬಾಳಲಿ ಎಂದು ಹಾರೈಸುತ್ತವೆ.

✦ ಕಣ್ಣಾಳ ಅಂಜಿನಪ್ಪ, ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ದಲಿತ ಮಹಾಸಭಾ (ರಿ.), ಬೆಂಗಳೂರು.
✦ ಎಂ.ಪಿ. ಸತ್ಯನಾರಾಯಣ (ಸತ್ತಿ) ಗ್ರಾ.ಪಂ. ಉಪಾಧ್ಯಕ್ಷರು, ಸಾಲಕಟ್ಟೆ ✦ ಎಂ.ಪಿ. ಸುರೇಶ್, ಕಂಟ್ರ್ಯಾಕ್ಟರ್
✦ ಮುತ್ತು, ರಿಯಲ್ ಎಸ್ಟೇಟ್ ✦ ತಿಮ್ಮಣ್ಣ, ತರಕಾರಿ ✦ ವಲಿವುಲ್ಲಾ ✦ ಸುಧಾಕರ್, ಆಟೋ ಚಾಲಕರ ಸಂಘ.
✦ ನಿಂಗಪ್ಪ ಡಿ.ಎಸ್.ಎಸ್. ✦ ಶಾಮನೂರು ನಾಗರಾಜ್
✦ ಬಿ.ಎನ್. ರಂಗಸ್ವಾಮಿ ಕಾಂಗ್ರೆಸ್ ಮುಖಂಡರು ✦ ಆಪೆ ಗಾಡಿ ಮಂಜುನಾಥ್
✦ ಮಡಿವಾಳರ ಸುರೇಶ್ ✦ ಬಿ.ಹೆಚ್. ರಾಘವೇಂದ್ರ ಎಸ್.ಎಸ್. ಮಾಲ್
✦ ಬೆಳಕೇರಿ ಅಂಜಿನಪ್ಪ ✦ ಬಿ.ಎನ್. ಮಂಜುನಾಥ್
✦ ಆರ್. ಹನುಮಂತ್ ✦ ಕೆ.ಎನ್. ಹರೀಶ್ ✦ ಮಲ್ಲೇಶ್
✦ ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗದ ಪದಾಧಿಕಾರಿಗಳು,
ಶಾಮನೂರು ಗ್ರಾಮದ ಕಾಂಗ್ರೆಸ್ ಮುಖಂಡರು ಹಾಗೂ ಅಭಿಮಾನಿಗಳು.




# ಹೊನ್ನಾಳಿಗೆ ನಗರ ಸಾರಿಗೆ ಶಾಸಕ ಎಂಪಿಆರ್ ಭರವಸೆ



ಹೊನ್ನಾಳಿ, ಜು. 15 - ನಗರಕ್ಕೆ ನಗರ ಸಾರಿಗೆ ಸೌಲಭ್ಯ ಅತಿವಶ್ಯಕವಾಗಿ ಬೇಕಾಗಿದ್ದು, ನೂರಕ್ಕೆ ನೂರು ನಗರ ಸಾರಿಗೆ ಬಸ್‌ಗಳನ್ನು ಬಿಡಿಸುತ್ತೇನೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಪಟ್ಟಣದ ಖಾಸಗಿ ಅನುದಾನಿತ ಶ್ರೀ ಮೃತ್ಯುಂಜಯ ಶಿವಾಚಾರ್ಯ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಬಸ್ ಸೌಲಭ್ಯ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಶುಕ್ರವಾರ ಶಾಸಕರ ನಿವಾಸಕ್ಕೆ ಆಗಮಿಸಿ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು, ಈಗಾಗಲೇ ಹಳ್ಳಿ ಹಳ್ಳಿಗಳಿಗೂ ಸರ್ಕಾರಿ ಬಸ್ ಸೌಲಭ್ಯಗಳನ್ನು ಕಲ್ಪಿಸಿದ್ದು, ಇನ್ನೂ ಹತ್ತು ಬಸ್ಸುಗಳ ಅವಶ್ಯಕತೆ ಇದ್ದು, ಅವುಗಳನ್ನು ಕೇಳಿದ್ದೇನೆಂದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಗರ ಸಾರಿಗೆ ಅವಶ್ಯಕತೆ ಇದ್ದು, ಈ ಬಗ್ಗೆ ಕೆಎಸ್‌ಆರ್‌ಟಿಸಿ ಎಂಡಿ ಅವರಿಗೆ ಫೋನ್ ಕರೆ ಮಾಡಿ ಮಾತನಾಡಿದ ಶಾಸಕರು, ಹೊನ್ನಾಳಿ ನಗರಕ್ಕೆ ಹಾಗೂ ಮಲದೇವರ ಕಟ್ಟೆಯಲ್ಲಿರುವ ಐಟಿಐ ಹಾಗೂ ಡಿಪ್ಲೋಮಾ ಕಾಲೇಜಿಗೆ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ನಗರ ಸಾರಿಗೆ ಸೌಲಭ್ಯದ ಅವಶ್ಯಕತೆ ಇದ್ದು, ಕೂಡಲೇ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಇದಕ್ಕೆ ಸ್ಪಂದಿಸಿದ ಎಂಡಿ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸುವುದಾಗಿ ಹೇಳಿದರು.

ಹೊನ್ನಾಳಿ ನಗರದಿಂದ ಕಾಲೇಜು, ಆಸ್ಪತ್ರೆ, ಕೋರ್ಟ್‌ಗಳು ಎರಡು ಕಿಲೋಮೀಟರಷ್ಟು ದೂರವಿದ್ದು ನಗರ ಸಾರಿಗೆ ವ್ಯವಸ್ಥೆಯಾದರೆ ಅನುಕೂಲವಾಗಲಿದ್ದು, ನಾಲ್ಕು ಬಸ್ಸುಗಳಲ್ಲಿ ಎರಡು ಬಸ್ಸುಗಳನ್ನಾದರೂ ಬಿಡಿಸಲಾಗುವುದು ಎಂದರು.

ಖಾಸಗಿ ಕಾಲೇಜುಗಳ ಮೈದಾನ ದುರಸ್ತಿ, ಕಾಯಕಲ್ಪವನ್ನು ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯೇ ಮಾಡಿಕೊಳ್ಳಬೇಕೆಂದ ಶಾಸಕರು, ಖಾಸಗಿ ಶಾಲಾ, ಕಾಲೇಜುಗಳ ನಿರ್ವಹಣೆ ಸಂಬಂಧಪಟ್ಟ ವಿದ್ಯಾಸಂಸ್ಥೆ ಹೊಣೆಯಾಗಿರುತ್ತದೆ ಎಂದರು. ಇನ್ನು ರಸ್ತೆ ಕೇಳಿದ್ದು ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದು ರಸ್ತೆ ಮಾಡಿಸಿ ಕೊಡುವುದಾಗಿ ಭರವಸೆ ನೀಡಿದರು.

ಕೆಎಸ್‌ಡಿಎಲ್ ನಿರ್ದೇಶಕ ಶಿವು ಹುಡೇದ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ದಾವಣಗೆರೆ ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಹಳದಪ್ಪ ಇದ್ದರು.

# ಇಂದು ವಿದ್ಯುತ್ ಗ್ರಾಹಕರ ಸಂವಾದ

ಬೆಸ್ಕಾಂ ನಗರ ಉಪ ವಿಭಾಗ-1 ರಿಂದ ಇಂದು ಮಧ್ಯಾಹ್ನ 3 ಕ್ಕೆ ಗ್ರಾಹಕರ ಸಂವಾದ ನಡೆಯಲಿದೆ ಎಂದು ಬೆಸ್ಕಾಂ ಎಇಇ ತಿಳಿಸಿದ್ದಾರೆ.


## ಬೇಕಾಗಿದ್ದಾರೆ

ಅಪೆ ಆಟೋ ಡೀಸೆಲ್, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ವಿದ್ಯಾರ್ಹತೆ: SSLC to Degree.
ಆಕರ್ಷಕ ಸಂಬಳ + Incentive+TA, DA.

## ಬೇಕಾಗಿದ್ದಾರೆ

ವರ್ಕ್‌ಷಾಪ್ ಸೂಪರ್‌ವೈಸರ್-2
(5 ವರ್ಷ ಅನುಭವ/ಫ್ರೆಶರ್‌ಗೂ ಸಹ ಆದ್ಯತೆ)
ಡೀಜಲ್ ಮೆಕ್ಯಾನಿಕ್-4
ಹೆಲ್ಪರ್ಸ್-4
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ. 3 ರಿಂದ 5
ಫೋನ್/ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.



## ಹೃದಯಪೂರ್ವಕ ಅಭಿನಂದನೆಗಳು




ಎ.ಬಿ ಹಬಿಬ್‌ವುಲ್ಲಾ
ಗೌರವಾಧ್ಯಕ್ಷರು ಮಂಡಕ್ಕಿಭಟ್ಟಿ ದಾವಣಗೆರೆ

ಎ.ಬಿ ರಹೀಮ್‌ಸಾಬ್
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ



ಹರಿಹರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ ಹರಿಹರ (TAPCMS) ಇದರ ಅಧ್ಯಕ್ಷರಾಗಿ ಆಯ್ಕೆಯಾಗಿರುವ
ಶ್ರೀ ಸಿ.ಬಿ ಅಬ್ದುಲ್ ಹಾದಿ
ಇವರಿಗೆ ಅಭಿನಂದನೆಗಳು



ಸಿ.ಬಿ ಹಮೀದ್ ಸಾಬ್, ಗ್ರಾಮ ಪಂಚಾಯತಿ ಮಾಜಿ ಸದಸ್ಯರು,
ಎ.ಬಿ ನಾಸೀರ್ ಸಾಬ್, ಮಾಜಿ ಸದಸ್ಯರು, ತಂಜೀಮ್ ಕಮಿಟಿ, ದಾವಣಗೆರೆ
ಸಿ. ಅಬ್ದುಲ್ ಮಜೀದ್, ಸದಸ್ಯರು, ಪುರಸಭೆ ಮಲೇಬೆನ್ನೂರು
ಎ.ಬಿ ಜಬೀವುಲ್ಲಾ, ಮಾಜಿ ಉಪಾಧ್ಯಕ್ಷರು ತಂಜೀಮ್ ಕಮಿಟಿ, ದಾವಣಗೆರೆ
ಯೂಸಫ್ ಖಾನ್, ಸದಸ್ಯರು, ಪುರಸಭೆ ಮಲೇಬೆನ್ನೂರು

# ಅಂತರ್ಜಾಲ ಸಂಪರ್ಕದಿಂದ ನೈಜ ಮಾನವೀಯ ಸಂಪರ್ಕಗಳು ಮಾಯ




ದಾವಣಗೆರೆ, ಜು. 15- ಅಂತರ್ಜಾಲ ಸಂಪರ್ಕದಿಂದ ನೈಜ ಮಾನವೀಯ ಸಂಪರ್ಕಗಳು ಮಾಯವಾಗುತ್ತಿವೆ ಎಂದು ಬೆಂಗಳೂರಿನ ಅಕ್ಯೂಟಿ ನಾಲೆಡ್ಜ್ ಸಂಸ್ಥೆಯ ನಿರ್ದೇಶಕ ನರೇಂದ್ರಬಾಬು ಹೇಳಿದರು.

ನಗರದ ಬಾಪೂಜಿ ಬಿ ಸ್ಕೂಲ್ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ 'ಆಕ್ಟಗಾನ್' ರಾಜ್ಯಮಟ್ಟದ ಅಂತರ ಕಾಲೇಜು ಸ್ಪರ್ಧೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ದಿನನಿತ್ಯ ಕನಿಷ್ಠ ಐದು ಜನರೊಂದಿಗಾದರೂ ನೇರ ಮಾತನಾಡುವುದನ್ನು ರೂಢಿ ಮಾಡಿಕೊಳ್ಳಬೇಕು ಎಂದರು.

ಆಧುನಿಕ ಔದ್ಯೋಮಿಕ ಕ್ಷೇತ್ರವು ನೇಮಕಾತಿಗಳಲ್ಲಿ ಅಂಕ ಗಳಿಕೆಯ ಸಾಮರ್ಥ್ಯಕ್ಕಿಂತ ಸಮಸ್ಯೆಗಳ ನಿವಾರಣೆಯ ಸವಾಲುಗಳನ್ನು ಸ್ವೀಕರಿಸುವ ಸಾಮರ್ಥ್ಯವನ್ನು ಪರಿಗಣಿಸುತ್ತಾರೆ ಎಂದು ತಿಳಿಸಿದರು. ನಿರ್ವಹಣಾ ಕ್ಷೇತ್ರದ ವಿದ್ಯಾರ್ಥಿಗಳು ಸಾರ್ವಜನಿಕ ಸಂಪರ್ಕದ ಬಗ್ಗೆಯೂ ಆಸಕ್ತಿ ವಹಿಸಬೇಕು ಮತ್ತು ಪ್ರತಿನಿತ್ಯ ಯಾವುದಾದರೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ಜೊತೆಗಾರರೊಂದಿಗೆ ಐದು ನಿಮಿಷವಾದರೂ ಮಾತನಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಅದರೊಂದಿಗೆ ಕ್ರೀಡೆ, ವ್ಯಾಯಾಮ ಮತ್ತು ಯೋಗವನ್ನು ಸಹ ನಿಯಮಿತವಾಗಿ ರೂಢಿಸಿಕೊಳ್ಳ ಬೇಕೆಂದರು.

ಸಣ್ಣಪುಟ್ಟ ಕಾರ್ಯಗಳೇ ಒಟ್ಟಾಗಿ ಮಹಾ ಯಶಸ್ಸನ್ನು ತಂದುಕೊಡುತ್ತವೆ. ಆದ್ದರಿಂದ ಯಾವ ಪುಟ್ಟ ಕಾರ್ಯವನ್ನು ತಿರಸ್ಕಾರ ಮಾಡುವಂತಿಲ್ಲ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಛೇರ್ಮನ್ ಅಥಣಿ ಎಸ್. ವೀರಣ್ಣ ಮಾತನಾಡಿ, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಸಾರಿಗೆ ಸಂಪರ್ಕ ಸಾಧನಗಳನ್ನು ಬಳಸಿಕೊಂಡರೆ ಸಾಲದು, ನಾವೂ ಬೆಳೆದು ಸಮಾಜವನ್ನೂ ಬೆಳೆಸಬೇಕು. ಆ ಮೂಲಕ ದೇಶದ ಉತ್ತಮ ಪ್ರಜೆಗಳಾಗಬೇಕು ಎಂದರು.

ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಮಾತನಾಡಿ, ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಯ ಅನಾವರಣಕ್ಕೆ ಉತ್ಸವ ಅವಕಾಶ ಕಲ್ಪಿಸುತ್ತದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಉತ್ಸವದ ನಿರ್ವಾಹಕ ಡಾ. ಪ್ರಕಾಶ್ ಅಳಲಗೇರಿ ಅವರು, ಸುಮಾರು ರಾಜ್ಯದ 60 ಕಾಲೇಜುಗಳಿಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು ಎಂದರು.

ಅಂತರರಾಷ್ಟ್ರೀಯ ವಾಲಿಬಾಲ್ ಆಟಗಾರ, ಏಕಲವ್ಯ ಪ್ರಶಸ್ತಿ ಪುರಸ್ಕೃತ ಅನೂಪ್ 'ಡಿ' ಕಾಸ್ತ್ರ, ಬಾಪೂಜಿ ಹೈಟೆಕ್ ಕಾಲೇಜಿನ ಪ್ರಾಚಾರ್ಯ ಬಿ. ವೀರಪ್ಪ, ಎಂಬಿಎ ಕಾಲೇಜು ವಿಭಾಗದ ಮುಖ್ಯಸ್ಥ ಡಾ. ಸುಜಿತ್ ಕುಮಾರ್, ಪ್ರೊ. ವಿಜಯ್, ಪ್ರೊ. ಶ್ರುತಿ ಮಾಕನೂರು ಮತ್ತಿತರರು ಉಪಸ್ಥಿತರಿದ್ದರು.

ಶ್ರೇಯ ಮತ್ತು ಸಂಗಡಿಗರಿಂದ ಯಕ್ಷಗಾನ ನೃತ್ಯ ರೂಪಕ ಪ್ರದರ್ಶಿಸಿದರು.ವಿಕಾಸ್ಮ ಪ್ರಾರ್ಥನಾ ಗೀತೆ ಹಾಡಿದರು. ತ್ರಿಭುವಾನಂದ ಸ್ವಾಗತಿಸಿದರು. ಪ್ರಾಂಶುಪಾಲ ಡಾ. ನವೀನ್ ನಾಗರಾಜ್ ವಂದಿಸಿದರು.

# ತುಂಗಭದ್ರೆ ವೀಕ್ಷಣೆಯಲ್ಲಿ ಜನರು




ಹರಿಹರ, ಜು.15- ಕಳೆದ 15 ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜಲಾಶಯ ಭರ್ತಿಯಾಗಿ ಹೆಚ್ಚಿನ ಪ್ರಮಾಣದ ನೀರನ್ನು ಹರಿದು ಬಿಡುತ್ತಿರುವ ಪರಿಣಾಮವಾಗಿ ನಗರದ ತುಂಗಭದ್ರಾ ನದಿ ಮೈದುಂಬಿಕೊಂಡು ಹರಿಯುತ್ತಿದೆ.

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದರಿಂದ ಪ್ರತಿನಿತ್ಯವೂ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ತಂಡೋಪ ತಂಡವಾಗಿ ನದಿ ನೋಡುವುದಕ್ಕೆ ಆಗಮಿಸುತ್ತಿದ್ದಾರೆ. ನದಿಯನ್ನು ನೋಡಲು ಆಗಮಿಸಿದ ಸಾರ್ವಜನಿಕರು ದಂಡೆಯ ಮೇಲೆ ಇರುವ ಕ್ಷೇತ್ರನಾಥ ಶ್ರೀ ಹರಿಹರೇಶ್ವರ ಸ್ವಾಮಿ, ಶ್ರೀ ರಾಘವೇಂದ್ರ ಸ್ವಾಮಿ, ಅಯ್ಯಪ್ಪ ಸ್ವಾಮಿ ಹಾಗೂ ದರ್ಗಾಕ್ಕೆ ಭೇಟಿ ನೀಡಿ ದೇವರ ದರ್ಶನ ಮಾಡುತ್ತಿದ್ದಾರೆ.

ನದಿಗೆ ಆಗಮಿಸುವ ಕುಟುಂಬದ ಸದಸ್ಯರು ವಿವಿಧ ಭಂಗಿಯ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು ಮತ್ತು ಬಡವರ ಬಾದಾಮಿ ಶೇಂಗಾ ಕಾಯಿ, ಕಾರಾ ಮಂಡಕ್ಕಿ, ಮಿರ್ಚಿ, ಪೇರಲ ಕಾಯಿ, ಕುರುಕುರೆ, ಚಿಪ್ಸ್ ಸವಿಯುತ್ತಾ ನದಿಯ ವೀಕ್ಷಣೆಯಲ್ಲಿ ತೊಡಗಿದ್ದುದು ಸಾಮಾನ್ಯವಾಗಿತ್ತು. ನದಿಯಲ್ಲಿ ಹೊಸ ಹೊಸ ತರಹದ ಮೀನು ಹಿಡಿಯಲು, ಅಲ್ಲಲ್ಲಿ ಬಲೆ ಹಾಕಿ ಕುಳಿತಿದ್ದ ಮೀನುಗಾರರ ಸಂಖ್ಯೆಯೂ ಹೆಚ್ಚಾಗಿತ್ತು. ಇನ್ನೂ ನದಿಗೆ ನೀರು ದಿನದಿಂದ ದಿನಕ್ಕೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ವೀಕ್ಷಿಸಲು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇರುವುದರಿಂದ ನದಿ ಪಾತ್ರದಲ್ಲಿ ಯಾವುದೇ ರೀತಿಯ ಅವಘಡ ಸಂಭವಿಸದಂತೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ.

ತಹಶೀಲ್ದಾರ್ ಎಂ. ಬಿ. ಅಶ್ವತ್ಥ್, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಮತ್ತು ಜಾನುವಾರುಗಳನ್ನು ನದಿಯಲ್ಲಿ ಬಿಡದಂತೆ ಹಾಗೂ ಸೇತುವೆಯ ಮೇಲೆ ಇರುವ ನೀರು ಸರಬರಾಜು ಪೈಪ್ ಮೇಲೆ ನಿಂತುಕೊಂಡು ಫೋಟೋ ತೆಗೆದುಕೊಳ್ಳದಂತೆ ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ.

# ಮುನ್ನೆಚ್ಚರಿಕಾ ಡೋಸ್ ಅಭಿಯಾನ ಆರಂಭ

ನವದೆಹಲಿ, ಜು. 15 – 18 ವರ್ಷ ಮೀರಿದವರಿಗೆ ಮುನ್ನೆಚ್ಚರಿಕಾ ಡೋಸ್ ಅನ್ನು ಉಚಿತವಾಗಿ ನೀಡುವ 75 ದಿನಗಳ ಅಭಿಯಾನಕ್ಕೆ ಸರ್ಕಾರಿ ಕೇಂದ್ರಗಳಲ್ಲಿ ಚಾಲನೆ ನೀಡಲಾಗಿದೆ.

ದೇಶದ 75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ 75 ದಿನಗಳ ಕಾಲ ಉಚಿತವಾಗಿ ಲಸಿಕಾ ಡೋಸ್ ನೀಡಲಾಗುತ್ತಿದೆ.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಶುಕ್ರವಾರದಂದು ನಿರ್ಮಾಣ ಭವನದಲ್ಲಿ ಕೊರೊನಾ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಮುನ್ನೆಚ್ಚರಿಕಾ ಡೋಸ್ ಪಡೆದರು.

18-59 ವರ್ಷದ 77.10 ಕೋಟಿ ಜನರು ಕೊರೊನಾ ಮುನ್ನೆಚ್ಚರಿಕೆ ಡೋಸ್ ಪಡೆಯಲು ಅರ್ಹರಾಗಿದ್ದಾರೆ. ಇವರಲ್ಲಿ ಶೇ.1ರಷ್ಟು ಜನ ಮಾತ್ರ ಇದುವರೆಗೂ ಮುನ್ನೆಚ್ಚರಿಕೆ ಡೋಸ್ ಪಡೆದಿದ್ದಾರೆ.

ಬಹಳಷ್ಟು ಭಾರತೀಯರು ಎರಡನೇ ಡೋಸ್ ಲಸಿಕೆ ಪಡೆದು ಒಂಭತ್ತು ತಿಂಗಳು ಉರುಳಿವೆ. ಆರು ತಿಂಗಳ ನಂತರ ಲಸಿಕೆಯ ಪ್ರಭಾವ ಕಡಿಮೆಯಾಗುತ್ತದೆ. ಹೀಗಾಗಿ ಮುನ್ನೆಚ್ಚರಿಕಾ ಡೋಸ್ ನೀಡುವುದು ಪ್ರಾಮುಖ್ಯತೆ ಪಡೆದಿದೆ. ಯಾತ್ರಾ ಮಾರ್ಗಗಳು, ಕಚೇರಿಗಳು, ರೈಲ್ವೆ ನಿಲ್ದಾಣ, ಶಾಲಾ ಕಾಲೇಜುಗಳೂ ಸೇರಿದಂತೆ ಹಲವು ತಾಣಗಳಲ್ಲಿ ವಿಶೇಷ ಲಸಿಕಾ ಶಿಬಿರಗಳನ್ನು ಆಯೋಜಿಸಲು ಸರ್ಕಾರ ನಿರ್ಧರಿಸಿದೆ.

# ಬುಳ್ಳಾಪುರದಲ್ಲಿಂದು ಗ್ರಾಮ ವಾಸ್ತವ್ಯ

ತಹಶೀಲ್ದಾರ್ ಒಳಗೊಂಡಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ತಾಲ್ಲೂಕಿನ ಆನಗೋಡು ಹೋಬಳಿ ಬುಳ್ಳಾಪುರ ಗ್ರಾಮಕ್ಕೆ ಇಂದು ಭೇಟಿ ನೀಡಿ ಗ್ರಾಮ ವಾಸ್ತವ್ಯ ಮಾಡುವರು. ಬುಳ್ಳಾಪುರ ಗ್ರಾಮದ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಹಶೀಲ್ದಾರ್ ಬಸನಗೌಡ ಕೋಟೂರ ತಿಳಿಸಿದ್ದಾರೆ.

# ಹರಿಹರ; ಗಂಗಾ ನಗರದ ಮನೆಗಳು ಜಲಾವೃತ: ಕಾಳಜಿ ಕೇಂದ್ರ ಆರಂಭ



## ಕಾಳಜಿ ಕೇಂದ್ರಕ್ಕೆ ಉಪವಿಭಾಗಾಧಿಕಾರಿ ದುರ್ಗಾಶ್ರೀ ಭೇಟಿ

ಹರಿಹರ, ಜು.15- ನಗರದ ಗಂಗಾನಗರದ ಹಲವು ಮನೆ ಗಳಿಗೆ ನೀರು ನುಗ್ಗಿರುವುದರಿಂದ 39 ಜನರಿಗೆ ಎಪಿಎಂಸಿ ಆವರಣದಲ್ಲಿ ಉಳಿದುಕೊಳ್ಳಲು ಕಾಳಜಿ ಕೇಂದ್ರದ ವ್ಯವಸ್ಥೆ ಮಾಡ ಲಾಗಿದ್ದು, ಜೊತೆಗೆ ಅವರಿಗೆ ಊಟ, ಆರೋಗ್ಯ ತಪಾಸಣೆ, ಔಷಧಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ದಾವಣಗೆರೆ ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಹೇಳಿದರು.

ಇತ್ತೀಚಿನ ದಿನಗಳಲ್ಲಿ ರಾಜ್ಯದಾದ್ಯಂತ ಧಾರಾಕಾರ ವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜಲಾಶಯ ಭರ್ತಿಗೊಂಡು ಹೆಚ್ಚಿನ ಪ್ರಮಾಣದ ನೀರನ್ನು ನದಿಗಳಿಗೆ ಹರಿ ಬಿಡುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ, ನಗರದ ಗಂಗಾನಗರದ ಹಲವು ಮನೆಗಳಿಗೆ ನೀರು ನುಗ್ಗಿದ್ದರಿಂದ ಎಪಿಎಂಸಿ ಆವರಣದಲ್ಲಿ ಕಾಳಜಿ ಕೇಂದ್ರದ ವ್ಯವಸ್ಥೆ ಮಾಡಲಾಗಿರುವ ಸ್ಥಳಕ್ಕೆ ಉಪವಿಭಾಗಾಧಿಕಾರಿ ದುರ್ಗಾಶ್ರೀ ಭೇಟಿ ಮಾಡಿ ನಿರಾಶ್ರಿತರ ಕುಟುಂಬದ ಸದಸ್ಯರಿಗೆ ಆತ್ಮಸ್ಥೈರ್ಯ ತುಂಬಿ ನಂತರ ಪತ್ರಕರ್ತರೊಂದಿಗೆ ಮಾತ ನಾಡಿದರು.

ಸಾರ್ವಜನಿಕರು ಇಂತಹ ಸಂದರ್ಭದಲ್ಲಿ ತಮ್ಮ ಹಠಮಾರಿತನವನ್ನು ಬಿಟ್ಟು, ಇಲಾಖೆಯ ಜೊತೆಗೆ ಸಹಕಾರ ನೀಡುವುದಕ್ಕೆ ಮುಂದಾಗಬೇಕಾಗಿದೆ ಎಂದು ಹೇಳಿದರು.

ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಮಾತನಾಡಿ, ನದಿಗೆ ನೀರು ದಿನದಿಂದ ದಿನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಿದುಬರುತ್ತಿರುವ ಕಾರಣ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಲಾಶಯದಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹೊರಗಡೆ ಬಿಡುವ ಸಾಧ್ಯತೆ ಇರುವುದರಿಂದ ಈ ಭಾಗದಲ್ಲಿ ಇನ್ನೂ ಸುಮಾರು 30 ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗುವ ಸಾಧ್ಯತೆ ಇರುವುದರಿಂದ ಅವರನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಮುಂದಾಗಿರುವುದಾಗಿ ಹೇಳಿದರು.

ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ ಗಂಗಾನಗರದ ನಿರಾಶ್ರಿತರು ತಂಗಿರುವ ಎಪಿಎಂಸಿ ಆವರಣದ ಕೊಠಡಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆ ಮಾಡಲಾಗಿದೆ. ನೀರಿನ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಗಂಗಾನಗರದ ಹಲವು ಮನೆಗಳಿಗೆ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ ಮತ್ತು ಯಾವುದೇ ರೀತಿಯ ವಿದ್ಯುತ್ ಅವಘಡ ನಡೆದರೂ ಅದನ್ನು ತಹಬಂದಿಗೆ ತರುವುದಕ್ಕೆ ಹಗಲು, ರಾತ್ರಿ ವೇಳೆಯಲ್ಲಿ ಸ್ಥಳದಲ್ಲಿ ಇಬ್ಬರು ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಬೆಸ್ಕಾಂ ಇಲಾಖೆ ಎಇಇ ಲಕ್ಷ್ಮಪ್ಪ ಹೇಳಿದರು.

ಪಿಎಸ್ಐ ಸುರೇಶ್, ನಗರಸಭೆ ಎಇಇ ಬಿರಾದಾರ, ಆರ್.ಓ. ಮಂಜುನಾಥ್, ವಿ.ಎ. ಸಮೀರ್, ದೇವರಾಜ್, ದಾದಾಪೀರ್ ಭಾನುವಳ್ಳಿ, ಪೊಲೀಸ್ ಕವಿತಾ, ನಿರಾಶ್ರಿತರ ಕುಟುಂಬದ ಸದಸ್ಯರು ಹಾಜರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿ ಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ ಹಾಗೂ ಇತರೆಡೆಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಐಐಟಿ ಮದ್ರಾಸ್‌ಗೆ ಸತತ ನಾಲ್ಕನೇ ವರ್ಷ ಮೊದಲ ಸ್ಥಾನ

## ಐ.ಐ.ಎಸ್.ಸಿ. ಬೆಂಗಳೂರಿಗೆ ಶ್ರೇಷ್ಠ ವಿಶ್ವವಿದ್ಯಾನಿಲಯದ ಹೆಗ್ಗಳಿಕೆ

ನವದೆಹಲಿ, ಜು. 15 – ಐಐಟಿ ಮದ್ರಾಸ್ ಸತತ ನಾಲ್ಕನೇ ವರ್ಷ ದೇಶದ ಅತ್ಯುನ್ನತ ಶೈಕ್ಷಣಿಕ ಸಂಸ್ಥೆ ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ. ಬೆಂಗಳೂರಿನ ಐ.ಐ.ಎಸ್.ಸಿ. ಶ್ರೇಷ್ಠ ವಿಶ್ವವಿದ್ಯಾನಿಲಯ ಹಾಗೂ ಸಂಶೋಧನಾ ಸಂಸ್ಥೆ ಎಂಬ ಸ್ಥಾನ ಪಡೆದಿದೆ.

ಕೇಂದ್ರ ಶಿಕ್ಷಣ ಸಚಿವಾಲಯವು ರಾಷ್ಟ್ರೀಯ ಸಂಸ್ಥೆಗಳಿಗಾಗಿ ಎನ್.ಐ. ಆರ್.ಎಫ್. ಎಂಬ ಶ್ರೇಯಾಂಕ ರೂಪಿಸಿದೆ. ಏಳನೇ ವರ್ಷ ರೂಪಿಸಿರುವ ಶ್ರೇಯಾಂಕವನ್ನು ಶುಕ್ರವಾರ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪ್ರಕಟಿಸಿದ್ದಾರೆ. ಐಐಟಿ ಮದ್ರಾಸ್, ಐಐಟಿ ಬಾಂಬೆ, ಐಐಟಿ ದೆಹಲಿ, ಐಐಟಿ ಕಾನ್‌ಪುರ, ಐಐಟಿ ಖರಗ್‌ಪುರ, ಐಐಟಿ ರೂರ್ಕಿ ಹಾಗೂ ಐಐಟಿ ಗುವಾಹತಿಗಳು ಮೊದಲ ಹತ್ತು ಸ್ಥಾನಗಳಲ್ಲಿವೆ. ಎಐಐಎಂಎಸ್ ಹಾಗೂ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯಗಳು ಒಟ್ಟಾರೆ ಶ್ರೇಯಾಂಕದಲ್ಲಿ 9 ಹಾಗೂ 10ನೇ ಸ್ಥಾನಗಳಲ್ಲಿವೆ.

# ಗಾಜಿನ ಮನೆಗೆ ಲೇಸರ್- ಬಣ್ಣದ ಕಾರಂಜಿ



ದಾವಣಗೆರೆ,ಜು.15- ನಗರದ ಗಾಜಿನ ಮನೆ ಉದ್ಯಾನವನದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಲೇಸರ್ ಶೋ ಮತ್ತು ಬಣ್ಣದ ಬೆಳಕಿನ ನೀರಿನ ಕಾರಂಜಿಯ ಪ್ರದರ್ಶನವನ್ನು ವಾರಾಂತ್ಯದ ದಿನಗಳಾದ ಶನಿವಾರ, ಭಾನುವಾರ, ಸಾರ್ವತ್ರಿಕ ರಜೆ ಮತ್ತು ವಿಶೇಷ ದಿನಗಳಂದು ಸಾರ್ವಜನಿಕರ ಭೇಟಿಗೆ ಅವಕಾಶ ನೀಡಿ ಟಿಕೆಟ್ ದರ ಮತ್ತು ಗಾಜಿನ ಮನೆಯ ಭೇಟಿಗೆ ಸಮಯ ನಿಗದಿ ಪಡಿಸಲಾಗಿದೆ. ಶನಿವಾರ, ಭಾನುವಾರ, ಸಾರ್ವತ್ರಿಕ ರಜೆ ದಿನಗಳು ಮತ್ತು ವಿಶೇಷ ದಿನಗಳಂದು ಸಂಜೆ 6.30 ರಿಂದ ರಾತ್ರಿ 8.30 ರವರೆಗೆ ಭೇಟಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಕಾರಂಜಿ ವೀಕ್ಷಣೆಗೆ ವಯಸ್ಕರಿಗೆ (ಒಬ್ಬರಿಗೆ) ರೂ.30 ಮತ್ತು ಮಕ್ಕಳಿಗೆ ರೂ.10 ದರ ನಿಗದಿಪಡಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

www.sparshhospital.com

SPARSH HOSPITAL THE TOUCH OF LIFE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಕ್ಯಾನ್ಸರ್ ತಜ್ಞರು ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಕ್ಯಾನ್ಸರ್ ಚಿಕಿತ್ಸೆ

ಡಾ. ದಿನೇಶ್ ಎಂ ಜಿ
MBBS, MS, Mch ( Surgical Oncology )
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು

ಸ್ತನ ಕ್ಯಾನ್ಸರ್, ಗರ್ಭ ಕೋಶದ ಕ್ಯಾನ್ಸರ್, ಬಾಯಿ ಮತ್ತು ಗಂಟಲು ಕ್ಯಾನ್ಸರ್, ಹೊಟ್ಟೆ ಮತ್ತು ಕರುಳಿನ ಕ್ಯಾನ್ಸರ್, ಶ್ವಾಸ ಕೋಶದ ಕ್ಯಾನ್ಸರ್, ಕಿಡ್ನಿ ಮತ್ತು ಮೂತ್ರಕೋಶದ ಕ್ಯಾನ್ಸರ್, ದೇಹದ ಯಾವುದೇ ಭಾಗದಲ್ಲಿ ಕ್ಯಾನ್ಸರ್ ಲಕ್ಷಣಗಳು ಕಂಡುಬಂದಲ್ಲಿ ಸಂಪರ್ಕಿಸಿ

ನೋಂದಣಿಗಾಗಿ ಕರೆಮಾಡಿ: 8951991304

ದಿನಾಂಕ: ಶನಿವಾರ, 16ನೇ ಜುಲೈ 2022

ಸಮಯ: ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30ರವರೆಗೆ

ಸ್ಥಳ: ಡಾ. ಮಾಧವಮೂರ್ತಿ ಕ್ಲಿನಿಕ್

ಡಾ. ನಿರ್ಮಲ ಕೇಸರಿ ಕ್ಲಿನಿಕ್ ಎದುರು, ಪಿ ಜೆ ಎಕ್ಸಟೆನ್ಶನ್, 3ನೇ ಮೈನ್, ದಾವಣಗೆರೆ

ವೈದ್ಯರು ಪ್ರತೀ ತಿಂಗಳ ಮೊದಲನೇ ಹಾಗು ಮೂರನೇ ಶನಿವಾರದಂದು ತಪಾಸಣೆಗೆ ಲಭ್ಯರಿರುತ್ತಾರೆ

ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತ

ಕುಕ್ಕುವಾಡ - 577 525. ದಾವಣಗೆರೆ ತಾ॥, ದಾವಣಗೆರೆ ಜಿಲ್ಲೆ.

25ನೇ ವರ್ಷದ 2021-2022ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ


ಸಹಕಾರಿಯ 2021-2022ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಯುತ ಜಿ.ಎಂ. ರುದ್ರಗೌಡ್ರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 16-07-2022ರ ಶನಿವಾರ ಮಧ್ಯಾಹ್ನ 3-30 ಘಂಟೆಗೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಏರ್ಪಡಿಸಿರುತ್ತೇವೆ. ಮಾನ್ಯ ಸರ್ವ ಸದಸ್ಯರೆಲ್ಲರೂ ಸರಿಯಾದ ಸಮಯಕ್ಕೆ ಸಭೆಗೆ ಆಗಮಿಸಬೇಕಾಗಿ ವಿನಂತಿ.

ಸಹಕಾರಿಯ ಆರ್ಥಿಕ ಪ್ರಗತಿ ಪಕ್ಷಿನೋಟ (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 2018-19 | 2019-20 | 2020-21 | 2021-22 | ಹೆಚ್ಚಳ ಶೇ % |
|---|---|---|---|---|---|---|
| 1. | ಸದಸ್ಯರ ಸಂಖ್ಯೆ | 5646 | 6177 | 6706 | 7777 | 16% |
| 2. | ಷೇರು ಬಂಡವಾಳ | 145.48 | 170.06 | 187.27 | 217.79 | 16% |
| 3. | ನಿಧಿಗಳು | 91.08 | 105.15 | 122.85 | 143.15 | 16% |
| 4. | ಠೇವಣಿಗಳು | 988.35 | 1196.27 | 1357.92 | 1630.94 | 20% |
| 5. | ಸದಸ್ಯರಿಗೆ ಸಾಲಗಳು | 902.46 | 1126.98 | 1265.05 | 1583.60 | 25% |
| 6. | ಲಾಭ ಗಳಿಕೆ | 1249.84 | 1474.94 | 1502.34 | 29.18 | 120% |
| 7. | ದುಡಿಯುವ ಬಂಡವಾಳ | 12.89 | 17.13 | 13.21 | 1979.32 | 31% |
| 8. | ಲಾಭಾಂಶ ಹಂಚಿಕೆ | 6% | 8% | 5% | 8% (ಉದ್ದೇಶಿತ) | |

ಆಡಳಿತ ಮಂಡಳಿಯ ಪರವಾಗಿ : ಜಿ.ಎಸ್.ರಾಜು, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಆಡಳಿತ ಮಂಡಳಿಯ ಸದಸ್ಯರು



ಶ್ರೀ ಜಿ.ಎಂ. ರುದ್ರಗೌಡ್ರು ಅಧ್ಯಕ್ಷರು; ಶ್ರೀ ಜಿ.ಆರ್. ಹರ್ಷ ಉಪಾಧ್ಯಕ್ಷರು; ಶ್ರೀ ಜಿ.ಎಸ್.ಶಿವಪ್ಪ ನಿರ್ದೇಶಕರು; ಶ್ರೀ ಕೆ.ಟಿ. ಚಂದ್ರಶೇಖರಪ್ಪ ನಿರ್ದೇಶಕರು; ಶ್ರೀ ಕೆ.ಶರಣಪ್ಪ ನಿರ್ದೇಶಕರು



ಶ್ರೀ ಬಿ.ಹೆಚ್. ಶಿವನಗೌಡ ನಿರ್ದೇಶಕರು; ಶ್ರೀ ಕೆ.ಎಂ. ಉಮೇಶ್ ನಿರ್ದೇಶಕರು; ಶ್ರೀ ಟಿ.ಎಂ. ಕರಿಬಸಪ್ಪ ನಿರ್ದೇಶಕರು; ಶ್ರೀ ಪಿ.ಎನ್. ಮಹೇಂದ್ರಪ್ಪ ನಿರ್ದೇಶಕರು; ಶ್ರೀ ಕೆ.ಜಿ. ಕೇದಾರಮೂರ್ತಿ ನಿರ್ದೇಶಕರು; ಶ್ರೀ ಕೆ.ಜಿ. ಯೋಗೇಂದ್ರಪ್ಪ ನಿರ್ದೇಶಕರು



ಶ್ರೀ ಕೆ.ಎ. ಮಹಮ್ಮದ್ ನಿರ್ದೇಶಕರು; ಶ್ರೀ ಬಿ. ವೆಂಕಟೇಶ್ ನಿರ್ದೇಶಕರು; ಶ್ರೀಮತಿ ಶೋಭಾ ಸಿ. ಮುಳ್ಳಳ್ಳಿ ಮಹಿಳಾ ನಿರ್ದೇಶಕರು; ಶ್ರೀಮತಿ ಡಿ.ಎಂ. ಮಂಜುಳ ಮಹಿಳಾ ನಿರ್ದೇಶಕರು; ಶ್ರೀಮತಿ ಕೆ. ಪವಿತ್ರ ಕಾನೂನು ಸಲಹೆಗಾರರು, ದಾವಣಗೆರೆ; ಶ್ರೀ ಎಸ್.ಎಸ್.ಬಸವನಗೌಡ್ರು ಕಾನೂನು ಸಲಹೆಗಾರರು, ಬ್ಯಾಡಗಿ; ಶ್ರೀ ಜಿ.ಎಸ್. ರಾಜು ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಿಶೇಷ ಸೂಚನೆ : 1) ಈಗಾಗಲೇ ಸರ್ವಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದರೆ ಇದನ್ನೆ ಆಹ್ವಾನವೆಂದು ಭಾವಿಸಿ ಸಭೆಗೆ ಆಗಮಿಸಬೇಕಾಗಿ ವಿನಂತಿ. 2) ವಾರ್ಷಿಕ ಮಹಾಸಭೆ ಇರುವುದರಿಂದ ದಿನಾಂಕ 16-07-2022ರಂದು ಮುಖ್ಯ ಕಛೇರಿ ಹಾಗೂ ಶಾಖಾ ಕಛೇರಿಗಳಿಗೆ ರಜೆ ಘೋಷಿಸಲಾಗಿದೆ.

ಮಾಸ್ಕ್, ಸ್ಯಾನಿಟೈಸರ್ ಬಳಸುವುದು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ.

# ಸಿದ್ದರಾಮಯ್ಯ ಕೊಟ್ಟ ಪರಿಹಾರದ ಹಣ ಬೇಡವೆಂದು ಎಸೆದ ಮಹಿಳೆ

## ಕೆರೂರು ಹಿಂಸಾಚಾರ: ಶಾಂತಿ ಬೇಕು ಎಂದ ಸಂತ್ರಸ್ತರು

ಬಾಗಲಕೋಟೆ, ಜು. 15 - ಹಿಂಸಾಚಾರದಲ್ಲಿ ಗಾಯಗೊಂಡ ಕುಟುಂಬದವರಿಗೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ನೀಡಿದ ಪರಿಹಾರವನ್ನು ಒಪ್ಪದ ಮಹಿಳೆಯೊಬ್ಬರು, ಹಣವನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ.

ಸಿದ್ದರಾಮಯ್ಯನವರು ತಮ್ಮ ಕ್ಷೇತ್ರ ಬಾದಾಮಿಯ ಕೆರೂರು ಪಟ್ಟಣ ಹಿಂಸಾಚಾರದಲ್ಲಿ ಗಾಯಗೊಂಡವರ ಕುಟುಂಬಸ್ಥರಿಗೆ ಪರಿಹಾರ ನೀಡಲು ತೆರಳಿದ್ದರು. ಗಾಯಗೊಂಡಿದ್ದ ಹನೀಫ್, ರಫೀಕ್ ಸೇರಿದಂತೆ ನಾಲ್ವರಿಗೆ ಸಾಂತ್ವನ ಹೇಳಿ ತಲಾ 50 ಸಾವಿರ ರೂಪಾಯಿಗಳಂತೆ 2 ಲಕ್ಷ ರೂಪಾಯಿ ನೀಡಿದ್ದರು.

ಆದರೆ, ಪರಿಹಾರ ಪಡೆಯಲು ಒಪ್ಪದ ರಫೀಕ್ ಸಹೋದರಿ ರಜ್ಮಾ ಅವರು, ನಮಗೆ ಹಣ ಬೇಡ. ಶಾಂತಿ ಬೇಕು. ನಾವು ಕಷ್ಟಪಟ್ಟು ಕೆಲಸ ಮಾಡಿ ಜೀವನ ನಡೆಸುತ್ತೇವೆ. ನಮಗೆ ಶಾಂತಿ ಬೇಕು, ನಮ್ಮನ್ನು ನಮ್ಮ ಪಾಡಿಗೆ ಶಾಂತಿಯಿಂದ ಬದುಕಲು ಬಿಡಿ ಎಂದರು. ಈ ಹಣ ಸರ್ಕಾರದ್ದಲ್ಲ. ಸಿದ್ದರಾಮಯ್ಯನವರು ತಮ್ಮ ಕೈಯಿಂದ ಕೊಟ್ಟಿದ್ದಾರೆ ಎಂದು ಅವರ ಜೊತೆಗಿದ್ದವರು ಹೇಳಿದರು. ಮಹಿಳೆ ಇನ್ನೇನೋ ಹೇಳುವಷ್ಟರಲ್ಲಿ ಸಿದ್ದರಾಮಯ್ಯ ಹಾಗೂ ಅವರ ಜೊತೆಗಿದ್ದವರು ಕಾರಿನಲ್ಲಿ ಹೊರಟರು.

ಕಾರುಗಳ ಹಿಂದೆ ಹೋದ ರಜ್ಮಾ ಅವರು, ಸಿದ್ದರಾಮಯ್ಯ ಕೊಟ್ಟಿದ್ದ ಹಣವನ್ನು ಕಾರಿನತ್ತ ಎಸೆದರು. ಆ ಹಣ ರಸ್ತೆಯಲ್ಲಿ ಬಿತ್ತು.

ಈ ಬಗ್ಗೆ ನಂತರ ಮಾತನಾಡಿರುವ ಸಿದ್ದರಾಮಯ್ಯ, ಮಾನವೀಯತೆ ದೃಷ್ಟಿಯಿಂದ ಹಣ ನೀಡಲಾಗಿತ್ತು ಎಂದಿದ್ದಾರೆ.

ಇದು ಪರಿಹಾರ ಅಲ್ಲ. ಕಷ್ಟದಲ್ಲಿರೋರಿಗೆ ಅನುಕೂಲ ಆಗಲಿ ಎಂದು ನೀಡಿದ್ದೇನೆ. ಹಣವನ್ನು ಪುನಃ ಅವರಿಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು. ಇದಕ್ಕೂ ಮುನ್ನ ಆಸ್ಪತ್ರೆಯಲ್ಲಿರುವ ಗಾಯಾಳುಗಳ ಯೋಗಕ್ಷೇಮ ವಿಚಾರಿಸಲು ಸಿದ್ದರಾಮಯ್ಯನವರು ಹೋಗಿದ್ದಾಗ ಅಲ್ಲಿಯೂ ಕೂಡ ರೋಗಿಗಳು ಹಣ ಪಡೆಯಲು ನಿರಾಕರಿಸಿದರು. ನಮಗೆ ಹಣ ಬೇಡ, ನೆಮ್ಮದಿ ಬೇಕು, ಬದುಕು ಬೇಕು ಎಂದು ಅಳಲು ತೋಡಿಕೊಂಡರು.

# ಬೊಮ್ಮ ನಂದರಾಜ್ ನಿಧನ



ದಾವಣಗೆರೆ ವಿನೋಬನಗರ 3ನೇ ಮೇನ್, 3ನೇ ಕ್ರಾಸ್ ವಾಸಿ,

ಬೊಮ್ಮ ರಾಮಜೀ
ರಾಮಜೀ ಆಟೋ ಕನ್ಸಲ್ಟೆಂಟ್ಸ್ ಮತ್ತು
ಬೊಮ್ಮ ತಿಪ್ಪೇಶ್,
ಎಸ್.ಟಿ.ಪಿ. ಆಟೋ ಕನ್ಸಲ್ಟೆಂಟ್ಸ್
ಸಹೋದರರಾದ

**ಬೊಮ್ಮ ನಂದರಾಜ್**

(ದಿ. ಬೊಮ್ಮನಂದ್ಯಪ್ಪನವರ ಬಸಪ್ಪನವರ 4ನೇ ಪುತ್ರ) (52)
ಇವರು ದಿ. : 15.07.2022ರ ಶುಕ್ರವಾರ
ಬೆಳಿಗ್ಗೆ 8.00 ಗಂಟೆಗೆ ಬೆಂಗಳೂರಿನಲ್ಲಿ

ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಪುತ್ರ, ಪುತ್ರಿ ಹಾಗೂ ಸಹೋದರರು, ಸಹೋದರಿ ಮತ್ತು ಮಾವಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ.:16.07.2022ರ ಶನಿವಾರ ಸಾಯಂಕಾಲ 5 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

*ಇಂತಿ ದುಃಖತಪ್ತ ಕುಟುಂಬ ವರ್ಗ ಹಾಗೂ ಬಂಧುಗಳು*

ಬಿ. ರಾಮಜೀ, ರಾಮಜೀ ಆಟೋ ಕನ್ಸಲ್ಟೆಂಟ್ಸ್
ಬಿ. ತಿಪ್ಪೇಶ್, ಎಸ್.ಟಿ.ಪಿ. ಆಟೋ ಕನ್ಸಲ್‌ಟೆಂಟ್ಸ್ ಮತ್ತು ಸಿಬ್ಬಂದಿ ವರ್ಗ
ಪಿ.ಜೆ. ನಾಗರಾಜ್ ಮತ್ತು ಸಹೋದರರು.
ದಾವಣಗೆರೆ ಡಿಸ್ಟ್ರಿಕ್ ಆಟೋ ಕನ್ಸಲ್ಟೆಂಟ್ಸ್, ಅಸೋಸಿಯೇಷನ್ ದಾವಣಗೆರೆ.
ಹಾಗೂ ಬೊಮ್ಮ ಕುಟುಂಬ ವರ್ಗ ಮತ್ತು ಬಂಧುಗಳು
ಪದ್ಮಶಾಲಿ ಸಮಾಜ ಬಂಧುಗಳು ಮತ್ತು ಮಿತ್ರರು, ದಾವಣಗೆರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte